


# ಭೃಗುವಾಣಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

Volume 35 : Issue 1 KARMUL/2021/79912 BENGALURU APRIL-JUNE 2022 Price Rs.10/-

## ಸಂಭ್ರಮದ ವಸಂತೋತ್ಸವ





ದೀಪ ದುರ್ಗಾ ನಮಸ್ಕಾರ
31.07.2022

ಪ್ರತಿಭಾ ಸ್ಪರ್ಧೆ
07.08.2022

ಗಣೇಶೋತ್ಸವ
04.09.2022

ಪ್ರತಿಭಾ ಮೇಳ ಮತ್ತು ಪ್ರತಿಭಾ ಪುರಸ್ಕಾರ
24.09.2022

*With best compliments from*

# TEDMAG ENGINEERING & MANAGEMENT CONSULTANTS (P) LTD.

Swagat, 1209, 11th Cross
HSR Layout Sector I, Bangalore – 560 102
Tel.: +91 (0)80 22586129
Fax: +91 (0)80 22589134

**E-mail:**
Bangalore : tedmagemc@hotmail.com
sridhar_bhat@yahoo.com
Chennai : myram47@gmail.com
Mumbai : mindi1940@yahoo.com

- MILK PROCESSING
- FOOD PROCESSING
- PLANT TISSUE CULTURE
- ALLIED INDUSTRIES

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 35 ಸಂಚಿಕೆ 01

ಅಧ್ಯಕ್ಷರು :
**ಬಾಳೇಕುದ್ರು ರಾಮಚಂದ್ರ ಉಪಾಧ್ಯ**

ಕಾರ್ಯದರ್ಶಿ :
**ಎ. ಸಂದೀಪ್ ರಾವ್**

ಸಂಪಾದಕರು :
**ಡಿ. ಶರತ್ ಕುಮಾರ್ ಭಟ್**

ಸಂಪಾದಕ ಮಂಡಳಿ :
**ಎಸ್. ಹರಿದಾಸ ಉಪಾಧ್ಯ**
**ಎಂ. ಸತ್ಯನಾರಾಯಣ ಭಟ್**

ವರದಿ ಲೇಖನ ಸಹಕಾರ :
**ಕೆ.ಎನ್.ಅಡಿಗ**
**ಟಿ.ಎಸ್.ನಾಗರಾಜ ಉಪಾಧ್ಯಾಯ**
**ಶ್ರೀಮತಿ ಶೋಭಾ ರಾಧಾಕೃಷ್ಣ**
**ಶ್ರೀಮತಿ ಸುಜಾತಾ ರಮೇಶ್**


ಜಾಹೀರಾತು ಸಮನ್ವಯ :
**ಎಂ. ಕೃಷ್ಣಪ್ರಸಾದ್**
**ಗೋಪಾಲಕೃಷ್ಣ ಕುಂಜತ್ತಾಯ**
**ವೈ.ಜಯಂತ ರಾವ್**

ಛಾಯಾಗ್ರಹಣ:
**ಕೆ. ಬಾಲಕೃಷ್ಣ ಉಪಾಧ್ಯಾಯ**
**ಮಟ್ಟಿ ರಾಮಚಂದ್ರ ರಾವ್**

ಪ್ರಸರಣ ಸಹಕಾರ:
**ರಂಜಿತ್ ಎಡಪಾಡಿತ್ತಾಯ**

ವಿಳಾಸ :
**ಆನಂದ ಬಳಗ**
ಹೋಟೆಲ್ ಅಜಂತಾ ಆವರಣ
22ಎ, ಎಂ.ಜಿ. ರಸ್ತೆ
ಬೆಂಗಳೂರು – 560 001
ದೂರವಾಣಿ : 2559 4457

Website:
www.anandabalaga.org



# ಅಧ್ಯಕ್ಷರ ನುಡಿ....

ಆನಂದ ಬಳಗದ ಎಲ್ಲ ಸದಸ್ಯಬಂಧುಗಳಿಗೆ ನನ್ನ ಸಹೃದಯ ನಮಸ್ಕಾರಗಳು. ಬಳಗವು ಇದೀಗ ನೂತನ ಪದಾಧಿಕಾರಿಗಳ ತಂಡದೊಂದಿಗೆ ತನ್ನ ವಾರ್ಷಿಕ ಕಾರ್ಯಕ್ರಮಗಳನ್ನು ವಸಂತೋತ್ಸವದೊಂದಿಗೆ ಶುಭಾರಂಭ ಮಾಡಿದೆ.

ಬಳಗವು ಹಲವು ದಶಕಗಳಿಂದ ಬೆಂಗಳೂರಿನಲ್ಲಿ ವಿಪ್ರಬಂಧುಗಳನ್ನು ಏಕಚ್ಛತ್ರದಡಿಯಲ್ಲಿ ಒಗ್ಗೂಡಿಸುವ ಮೂಲಕ ಸಮುದಾಯಕ್ಕೆ ಅನನ್ಯ ಸೇವೆಯನ್ನು ಸಲ್ಲಿಸುವಲ್ಲಿ ಅನೇಕ ಹಿರಿಯರ ಪರಿಶ್ರಮ ಮತ್ತು ಮಾರ್ಗದರ್ಶನಗಳ ಕೊಡುಗೆಗಳು ಸ್ಮರಣೀಯ. ದಿವಂಗತರಾದ ಡಾ. ಪಿ.ಜೆ.ಬಾಗಿಲ್ತಾಯ, ಪಿ.ವಿಷ್ಣುಮೂರ್ತಿ ಎರ್ಕಾಡಿತ್ತಾಯ, ಎಸ್.ನಾರಾಯಣಮೂರ್ತಿ, ಪಡುಬಿದ್ರೆ ರಾಘವೇಂದ್ರ ರಾವ್, ಸದಾನಂದ ಮಡಿಯವರಲ್ಲದೆ, ಶ್ರೀ ಎಸ್.ಟಿ.ಆರ್. ಮಡಿ, ಶ್ರೀ ವಿ.ಎಸ್.ಭಟ್, ಶ್ರೀಮತಿ ಗೀತಾ ವಾಸುದೇವ ರಾವ್, ಶ್ರೀಮತಿ ವಿಜಯಲಕ್ಷ್ಮೀ ಭಟ್ ಅವರುಗಳು ಸೇರಿದಂತೆ ಹಲವಾರು ಹಿರಿಯರು ಸಂಸ್ಥೆಯ ಬೆಳವಣಿಗೆಯಲ್ಲಿ ಮತ್ತು ಸೇವೆಯಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ.

ಸಂಸ್ಥೆಯು ಸದಸ್ಯರಿಗಾಗಿ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಕೌಟುಂಬಿಕ ಪುರೋಭಿವೃದ್ಧಿಯ ಹತ್ತು ಹಲವು ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಸದಸ್ಯ ಬಂಧುಗಳ ಸಮಗ್ರ ಕುಟುಂಬವೂ ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಮತ್ತು ಸಂಭ್ರಮಿಸಲು ಅವಕಾಶವಿದೆ. ಸದಸ್ಯರ ಮತ್ತು ಮಕ್ಕಳ ಪ್ರತಿಭಾ ವಿಕಸನಕ್ಕಾಗಿಯೂ ಸಂಸ್ಥೆಯಲ್ಲಿ ಕಾರ್ಯಕ್ರಮಗಳಿವೆ.

ಕಳೆದ ಎರಡು ವರ್ಷಗಳಲ್ಲಿ ಕೊರೊನಾ ಸಾಂಕ್ರಾಮಿಕದ ಕಾರಣದಿಂದ ಬಳಗದ ಹಲವು ಕಾರ್ಯಕ್ರಮಗಳನ್ನು ಕೈಬಿಡಬೇಕಾಯಿತು.ಇನ್ನು ಕೆಲವನ್ನು ಸರಳವಾಗಿ ಆಚರಿಸಬೇಕಾಯಿತು. ಈಗ ಕೊರೊನಾ ಸಮಸ್ಯೆಯು ನಿವಾರಣೆಯಾಗಿದೆ ಎಂದುಕೊಳ್ಳೋಣ. ದೇಶದ ಹಲವೆಡೆ ಮತ್ತು ಜಗತ್ತಿನ ವಿವಿಧೆಡೆ ಅಗಾಗ ಸಾಂಕ್ರಾಮಿಕ ಪಿಡುಗಿನ ಸುದ್ದಿಗಳು ಬಿತ್ತರವಾಗುತ್ತವಾದರೂ ನಾವು ಮಾಸ್ಕ್ ಧರಿಸಿ ಆರೋಗ್ಯ ನಿಯಮಗಳ ಪಾಲನೆ ಮಾಡುತ್ತಿದ್ದರೆ ಸಮಸ್ಯೆಯಾಗಲಿಕ್ಕಿಲ್ಲ.

ಸದ್ಯವೇ ಗಣೇಶೋತ್ಸವ, ದೀಪ ದುರ್ಗಾ ನಮಸ್ಕಾರ, ಪ್ರತಿಭಾ ಮೇಳ ಇತ್ಯಾದಿ ಕಾರ್ಯಕ್ರಮಗಳು ನಡೆಯಲಿಕ್ಕಿವೆ. ಮುಂದಿನ ಕಾರ್ಯಕ್ರಮಗಳಲ್ಲಿ ನಾವು ಹೆಚ್ಚಿನ ಸಂಖ್ಯೆಯಲ್ಲಿ ಸೇರೋಣ. ಬಳಗದ ಬೆಳವಣಿಗೆಯಲ್ಲಿ ಕೈಜೋಡಿಸೋಣ. ಶುಭಕೃತ್ ಸಂವತ್ಸರವು ಸರ್ವರಿಗೂ ಶುಭವನ್ನುಂಟುಮಾಡಲಿ ಎಂದು ಆಶಿಸುವೆ.

**ಬಾಳೆಕುದ್ರು ರಾಮಚಂದ್ರ ಉಪಾಧ್ಯ**

## Executive Committee Members 2022-2024

**Name** **Contact Numbers**

***President***
B. Ramachandra Upadhya

***Vice Presidents***
S. Haridas upadhya
S.N. Sharathchandra

***Secretary***
A. Sandeep Rao

***Treasurer***
M.K. Gurumurthy

***Convener - Cultural wing***
Smt. Shobha Radhakrishna

***Convener - Youth wing***
Prakash K. Bhat

***Convener - Religious wing***
T.S. Nagaraja Upadhyaya

***Convener - Edu. Assistance Programme***
B.S. Balachandra Tolpadi

***Convener - Membership Dev. Wing***
M. Krishnaprasad

***Convener - Public Relation Wing***
KN.Adiga

***Covener - Comunity Services***
Y. Jayanth Rao

***Convener - Media & Communications***
M. Dinesh Rao

***Editor - BHRUGUVANI***
D. Sharath Kumar Bhat

***Members:***
Smt. Geetha V. Rao
P.C. Rao
P.N.V. Murthy
Mohan Rao M.
Gopalkrishna K.
Ramesh Bhat H.

***Past Presidents/Permanent Invitees***
Smt. Vijayalakshmi Bhat
P.S.Bagilthaya
U.A.P. Ballal
K. Vasudeva Rao
S.T.R. Madi


***Special Invitees***
U.V. Krishnamurthy
Y. Shreepathi Bhat
Smt. Geetha P.R. Rao
Smt. Sudha M. Rao
Radhakrishna Y.
Sathyanarayana Bhat M.
Dr. Smt. Veena Sharath
Smt. Madhavi Ballal
Gururaj Pejavar
Madhava Upadhya
Rajesh Rao P.
Smt. Sowmya K.V.
Matti Ramachandra Rao

## ಒಳಪುಟಗಳಲ್ಲಿ.....

ಅಧ್ಯಕ್ಷರ ನುಡಿ ... 1
ಸಂಪಾದಕೀಯ ... 3
ದೀಪ ದುರ್ಗಾ ನಮಸ್ಕಾರ ಪೂಜೆ ... 4
ಮಕ್ಕಳ ಪ್ರತಿಭಾ ಸ್ಪರ್ಧೆ ... 5
ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನ ... 5
ಪ್ರತಿಭಾ ಮೇಳ ಮತ್ತು ಪುರಸ್ಕಾರ ... 6
ಗಣೇಶೋತ್ಸವ ... 6
ಸಂಭ್ರಮದ ವಸಂತೋತ್ಸವ ... 7
ಮನದಾಳ ಕವನ ಸಂಕಲನ ಬಿಡುಗಡೆ ... 8
ಪ್ರೊ. ರಾಧಾಕೃಷ್ಣರಿಗೆ ಡಿ.ಲಿಟ್. ಪದವಿ ... 10
ಪುತ್ತೂರಾಯರಿಗೆ ಗೌರವಾರ್ಪಣೆ ... 10
ಕೆ.ಎನ್. ಅಡಿಗರಿಗೆ ಪ್ರಶಸ್ತಿತ್ರಯ ... 10
ವೇದಿಕೆಯನೇರಿದಾಗ ... 11
Stock Markets in Bear Phase. Good luck for Investors ! ... 12
ಸಮಾಜಕ್ಕಾಗಿ ಬದುಕಿದ ಆದರ್ಶ ಮಹನೀಯ ... 14
ತುಳಸಿಯ ಔಷಧೀಯ ಉಪಯೋಗಗಳು ... 15
ಕಾರ್ಯ ಸಚೇತಕ ಗಣಪತಿ ... 16
ವ್ಯಾಸಂಗ ಸಹಾಯ ಯೋಜನೆ ... 17
ಆತ್ಮಾಂಜಲಿ ಮುದ್ರೆ ... 18
ಮಕ್ಕಳು ಎಂದಿಗೂ ಮಕ್ಕಳೇ ... 20

ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ, ವಿನಹ ಸಂಪಾದಕ ಮಂಡಳಿಯದಲ್ಲ.

## ಶುಭಾಶಯ






ಭೃಗುವಾಣಿಯ ಸಮಸ್ತ ಓದುಗ ಬಂಧುಗಳಿಗೆ, ಜಾಹೀರಾತುದಾರರಿಗೆ ಹಾಗೂ ಆನಂದ ಬಳಗದ ಎಲ್ಲಾ ಸದಸ್ಯ ಬಾಂಧವರಿಗೆ

**ವರಮಹಾಲಕ್ಷ್ಮಿ ಹಬ್ಬ ಮತ್ತು ಗಣೇಶೋತ್ಸವದ** ಶುಭಾಶಯಗಳು

**– ಸಂಪಾದಕ ಸಮಿತಿ**



# ಸಂಪಾದಕೀಯ....

ಪ್ರಿಯ ಓದುಗ ಬಂಧುಗಳೇ,

ಆನಂದ ಬಳಗದ ಮುಖವಾಣಿಯಾಗಿ ದಶಕಗಳಿಂದ ನಿರಂತರವಾಗಿ ಬೆಳಕು ಕಾಣುತ್ತಿರುವ ಭೃಗುವಾಣಿ ಪತ್ರಿಕೆಯ ನಿರ್ವಹಣೆಯ ಹೊಣೆ ಇದೀಗ ನನ್ನ ಹೆಗಲೇರಿದೆ.

ದಿವಂಗತ ನರಸಿಂಹರಾಯರು ಪತ್ರಿಕೆಯನ್ನು ಸಂಪಾದನೆ ಮಾಡುತ್ತಿದ್ದ ಕಾಲದಿಂದಲೂ ಈ ಪತ್ರಿಕೆಯ ಬೆಳವಣಿಗೆಯನ್ನು ನೋಡುತ್ತಾ ಬಂದಿದ್ದೇನೆ. ಅವರ ನಂತರ ಶ್ರೀ ಹರಿದಾಸ ಉಪಾಧ್ಯರು, ಶ್ರೀ ಹರಿದಾಸ ಮುನ್ನೂರು ಮತ್ತು ಶ್ರೀ ಸತ್ಯನಾರಾಯಣ ಭಟ್ ಅವರು ಪತ್ರಿಕೆಯನ್ನು ಸುಂದರವಾಗಿ, ಸಂಪನ್ನವಾಗಿ, ಸಮರ್ಥವಾಗಿ ಕಟ್ಟಿ ಬೆಳೆಸಿದ್ದಾರೆ.

ಹತ್ತು ದಿಕ್ಕುಗಳಿಂದ ಹರಿದು ಬರುವ ವಿಷಯಗಳನ್ನು ಒಟ್ಟು ಸೇರಿಸಿ ಒಂದು ಸುಂದರ ಸಂಚಿಕೆಯನ್ನಾಗಿಸಿ ನೀಡುವುದು ಸುಲಭದ ಸಂಗತಿಯೇನಲ್ಲ. ಊಟವನ್ನು ರುಚಿಕಟ್ಟಾಗಿ ತಯಾರಿಸುವಂತೆಯೇ, ಶಿಲ್ಪವನ್ನು ಪರಿಪೂರ್ಣವಾಗಿ ಕೆತ್ತುವಂತೆಯೇ, ತಾಳಲಯಬದ್ಧವಾಗಿ ನಾಟ್ಯವನ್ನು ಮಾಡುವಂತೆಯೇ, ಸಂಗೀತವನ್ನು ಹಾಡುವಂತೆಯೇ ಪತ್ರಿಕೆಯೂ ರಸವತ್ತಾಗಿ ಇರಬೇಕಾದರೆ ಅನುಭವ, ಪರಿಶ್ರಮ ಅಗತ್ಯ.

ಪತ್ರಿಕೆಯ ಘೋಷಣಾಪತ್ರದಲ್ಲಿ ಕನ್ನಡ, ತುಳು ಮತ್ತು ಇಂಗ್ಲಿಷ್ ಮೂರೂ ಭಾಷೆಗಳಲ್ಲಿ ಪ್ರಕಟನೆಯ ಅವಕಾಶವಿದ್ದು, ಇದು ತ್ರೈಭಾಷಿಕ ಪತ್ರಿಕೆಯಾಗಿರುವುದು ಹೆಮ್ಮೆಯ ಸಂಗತಿಯೂ ಹೌದು.

ಯಾಕೆ ಮೂರೂ ಭಾಷೆಗಳಲ್ಲಿ ವಿಷಯಗಳನ್ನು ಪ್ರಕಟಿಸಬಾರದು? ಬರೆಯಬಲ್ಲವರು ಅನೇಕರಿರಬಹುದು. ನಾವು ಬರೆದದ್ದು ಪ್ರಕಟವಾಗುತ್ತದೆಂಬ ಖುಷಿ ಕೂಡಾ ಇರುತ್ತದಲ್ಲವೇ? ಕನ್ನಡ ಮತ್ತು ಇಂಗ್ಲಿಷ್ ವರದಿ, ಲೇಖನಗಳು ಈಗಾಗಲೇ ಬರುತ್ತಿವೆ. ತುಳುವಿನಲ್ಲಿ ಬರೆಯುವವರು ಕಡಿಮೆ. ನಮ್ಮ ತುಳು ಭಾಷೆಯಲ್ಲಿ ಒಂದು ವಿಶೇಷ ಮಾಧುರ್ಯವಿದೆ ಅಲ್ಲವೇ? ಬರೆಯಿರಿ. ಸಾಹಿತ್ಯದ ನಿಯಂತ್ರಣ ಮೊದಲ ಬರವಣಿಗೆಯಲ್ಲೇ ಸಿಗದಿರಬಹುದು. ಬರೆದು, ಬರೆದು ಬರಹಗಾರರಾಗಲು ಸಾಧ್ಯವಿದೆ. ಭಾಷೆ ಯಾವುದೇ ಇರಲಿ, ವರದಿ ಮತ್ತು ಲೇಖನಗಳೇ ಇರಬೇಕೆಂದಿಲ್ಲ. ಕಥೆ, ಕವಿತೆಗಳಿಗೂ ಸ್ವಾಗತ. ಪ್ರಕಟಿಸುವ ತೀರ್ಮಾನ ಮಾತ್ರ ಸಂಪಾದಕ ಮಂಡಳಿಗಿರಲಿ.

ದೇವರಿಗೆ ಪಲ್ಲಕ್ಕಿ ಇದ್ದ ಹಾಗೆ ಪತ್ರಿಕೆಗಳಿಗೆ ಜಾಹೀರಾತುಗಳು. ನಮಗೆ ಸದಾ ಪ್ರೋತ್ಸಾಹ ನೀಡುವ ಜಾಹೀರಾತುದಾರರಿಗೆ ಕೈಮುಗಿದು ವಂದಿಸುತ್ತಾ, ಹೊಸ ಜಾಹೀರಾತುದಾರರೂ ನಮ್ಮ ಪತ್ರಿಕಾಬಳಗವನ್ನು ಸೇರಬನ್ನಿ ಎಂದು ಸ್ವಾಗತಿಸುತ್ತೇವೆ.

ವಿಶ್ವಾಸವಿಟ್ಟು ಪತ್ರಿಕೆಯ ಜವಾಬ್ದಾರಿಯನ್ನು ನನ್ನ ಹೆಗಲಿಗೇರಿಸಿದ ಬಳಗದ ಅಧ್ಯಕ್ಷರು, ಪದಾಧಿಕಾರಿಗಳಿಗೆ ವಂದಿಸುತ್ತಾ ಸರ್ವಸಹಕಾರವನ್ನು ಕೋರುತ್ತೇನೆ.

**– ಡಿ. ಶರತ್ ಕುಮಾರ್ ಭಟ್**



# ದೀಪ ದುರ್ಗಾ ನಮಸ್ಕಾರ ಪೂಜೆ



## ಆನಂದ ಬಳಗ–ಧಾರ್ಮಿಕ ವಿಭಾಗ

॥ ಸರ್ವಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಕೇ ॥ ॥ ಶರಣ್ಯೇ ತ್ರ್ಯಂಬಕೇ ದೇವೀ ನಾರಾಯಣೀ ನಮೋಸ್ತುತೇ॥

**ದಿನಾಂಕ 31–7–2022, ಭಾನುವಾರ ಸಾಯಂಕಾಲ 4 ಗಂಟೆಯಿಂದ**

**ಸ್ಥಳ : ಆನಂದ ಸಭಾಗೃಹ,** ಬನ್ನೇರುಘಟ್ಟ ರಸ್ತೆ, ಬೆಂಗಳೂರು

| | | | |
|---|---|---|---|
| ಸೇವಾವಿವರ : | ಪೂರ್ಣ ಸೇವೆ | : | ರೂ. 1,000/– |
| | ಪುಷ್ಪಾಲಂಕಾರ | : | ರೂ. 500/– |
| | ಸೇವಾ ಸಂಕಲ್ಪ | : | ರೂ. 250/– |

ಸದಸ್ಯ ಬಂಧುಗಳೇ,

ಕಲಿಯುಗದಲ್ಲಿ ಶೀಘ್ರ ಫಲವನ್ನು ನೀಡುವ ಶ್ರೀ ದುರ್ಗಾಮಾತೆಯ ಆರಾಧನೆಯು ನಮಗೆ, ನಿಮಗೆ ಮತ್ತು ನಮ್ಮೆಲ್ಲರ ಬಳಗಕ್ಕೆ ಶ್ರೇಯಸ್ಕರ. ಈ ಹಿನ್ನಲೆಯಲ್ಲಿ ಕಳೆದ ಕೆಲವಾರು ವರ್ಷಗಳಿಂದ ನಮ್ಮ ಬಳಗವು ಪ್ರತಿವರ್ಷವೂ ಆಷಾಡ ಮಾಸದಲ್ಲಿ ಸಾಮೂಹಿಕ ದೀಪದುರ್ಗಾ ನಮಸ್ಕಾರ ಪೂಜೆಯನ್ನು ನಡೆಸುತ್ತಾ ಬಂದಿದೆ. ಸದಸ್ಯರೂ ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಧನ್ಯತೆ ಪಡೆಯುತ್ತಿದ್ದಾರೆ. ಅದರಂತೆ ಈ ವರ್ಷವೂ ಜುಲೈ 31, ಭಾನುವಾರ–ದಂದು ಬಳಗದ ಧಾರ್ಮಿಕ ವಿಭಾಗದ ನೇತೃತ್ವದಲ್ಲಿ ಇತರ ವಿಭಾಗಗಳ ಸಹಯೋಗದಲ್ಲಿ ಏರ್ಪಡಿಸಿರುವ ಈ ಕಾರ್ಯಕ್ರಮದಲ್ಲಿ ಸದಸ್ಯ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಶ್ರೀದೇವಿಯ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಕೋರುತ್ತೇವೆ.

**ವಿಶೇಷ ಸೂಚನೆ :**

* ಸದಸ್ಯರು ಸಾಂಪ್ರದಾಯಿಕ ಉಡುಪಿನಲ್ಲಿ ಆಮಿಸಬೇಕಾಗಿ ವಿನಂತಿ.
* ಲಭ್ಯವಿದ್ದರೆ ದುರ್ಗೆಗೆ ಪ್ರಿಯವಾದ ಕೇಪುಳ (ಕಿಸ್ಕಾರ, ಗಿರಿಕರ್ಣಿಕಾ ಎಂಬ ಹೆಸರುಗಳೂ ಇವೆ) ಮತ್ತಿತರ ಹೂವುಗಳನ್ನು ತರಬೇಕಾಗಿ ಕೋರುತ್ತೇವೆ.
* ಪೂಜೆಯ ಬಳಿಕ ಭೋಜನ ವ್ಯವಸ್ಥೆ ಮಾಡಲಾಗಿದೆ.

| | | |
|---|---|---|
| **ಬಾ.ರಾಮಚಂದ್ರ ಉಪಾಧ್ಯ** | **ಎ. ಸಂದೀಪ್ ರಾವ್** | **ಟಿ.ಎಸ್. ನಾಗರಾಜ ಉಪಾಧ್ಯಾಯ** |
| ಅಧ್ಯಕ್ಷರು, ಆನಂದ ಬಳಗ | ಕಾರ್ಯದರ್ಶಿ, ಆನಂದ ಬಳಗ | ಸಂಚಾಲಕರು, ಧಾರ್ಮಿಕ ವಿಭಾಗ |

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :**

| | | |
|---|---|---|
| **ಟಿ.ಎಸ್. ನಾಗರಾಜ ಉಪಾಧ್ಯಾಯ** | **ಶ್ರೀಮತಿ ವಿಜಯಲಕ್ಷ್ಮೀ ಭಟ್** | **ವೈ. ಜಯಂತ ರಾವ್** |
| 9341226763 | 9448001892 | 9448274519 |

# ಸದಸ್ಯರಲ್ಲಿ ಮನವಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆಯನ್ನು ಸದಸ್ಯರಿಗೆ ಬಳಗದಲ್ಲಿ ಲಭ್ಯವಿರುವ ವಿಳಾಸದ ಪ್ರಕಾರ ಕಳುಹಿಸಿಲಾಗುತ್ತಿದೆ. ಆದರೆ ಪ್ರತಿ ಬಾರಿಯೂ ಕೆಲವೊಂದು ಪ್ರತಿಗಳು ವಿಳಾಸ ಪತ್ತೆಯಾಗದೆ ವಾಪಸ್ಸು ಬರುತ್ತಿದೆ. ಸದಸ್ಯರು ತಮ್ಮ ಮನೆಯ ವಿಳಾಸಗಳನ್ನು ಬದಲಿಸಿದ್ದು, ಹೊಸ ವಿಳಾಸವನ್ನು ಬಳಗಕ್ಕೆ ನೀಡದಿರುವುದು ಇದಕ್ಕೆ ಮುಖ್ಯ ಕಾರಣ. ನಮ್ಮ ತಂಡವು ಹಿಂದೆ ಬಂದಿರುವ ಭೃಗುವಾಣಿಯಲ್ಲಿರುವ ಸದಸ್ಯರ ವಿಳಾಸವನ್ನು ಆಧರಿಸಿ, ಹೊಸ ವಿಳಾಸವನ್ನು ತಿಳಿದುಕೊಳ್ಳುವ ಬಗ್ಗೆ ವಿವಿಧ ರೀತಿಯಲ್ಲಿ ಪ್ರಯತ್ನಿಸುತ್ತಿದೆ. ಕೆಲವು ಸಲ ಯಶಸ್ವಿಯೂ ಆಗಿದೆ.

ಸದಸ್ಯ ಬಾಂಧವರಲ್ಲಿ ನಮ್ಮ ವಿನಂತಿಯೇನೆಂದರೆ, ತಮಗೆ ಪರಿಚಯವಿರುವ ಸದಸ್ಯರು ತಮ್ಮ ಮನೆಯ ವಿಳಾಸವನ್ನು ಬದಲಿಸಿರುವುದು ತಮಗೆ ತಿಳಿದಿದ್ದರೆ, ತಮ್ಮ ಗಮನಕ್ಕೆ ಬಂದಿದ್ದರೆ, ಅವರ ಹೆಸರು, ಹೊಸ ವಿಳಾಸ ಅಥವಾ ಅವರ ಮೊಬೈಲ್ ಸಂಖ್ಯೆಯನ್ನು ನಮಗೆ ತಿಳಿಸಿರಿ. ಅಂತಹ ಸದಸ್ಯರ ಸರಿಯಾದ ವಿಳಾಸವನ್ನು ತಿಳಿದು, ನಮ್ಮಲ್ಲಿರುವ ವಿಳಾಸ ಪಟ್ಟಿಯನ್ನು ಪರಿಷ್ಕರಿಸಲು ಇದರಿಂದ ಅನುಕೂಲ. ಜೊತೆಗೆ ಅವರಿಗೆ ಭೃಗುವಾಣಿಯೂ ತಲುಪುತ್ತವೆ. ವಿಳಾಸ ತಿಳಿಯದೆ ಹಿಂದೆ ಬರುವ ಪ್ರತಿಗಳ ಸಂಖ್ಯೆಯೂ ಕಡಿಮೆ ಆಗುತ್ತದೆ.

ಹಾಗೇನೆ ಸದಸ್ಯರು ತಮ್ಮ ವಿಳಾಸವನ್ನು ಬದಲಿಸಿದಾಗ ದಯವಿಟ್ಟು ನಮಗೆ ದೂರವಾಣಿ/ವಾಟ್ಸಪ್ ಮೂಲಕ ತಿಳಿಸಬೇಕಾಗಿ ಕೋರಿಕೆ.

ದಿನೇಶ್ ರಾವ್.ಎಂ., ಸಂಚಾಲಕರು,
ಮಾಧ್ಯಮ ಮತ್ತು ಸಂವಹನ ಸಮಿತಿ
(ಮೊಬೈಲ್: 99456 88955)

# ಮಕ್ಕಳ ಪ್ರತಿಭಾ ಸ್ಪರ್ಧೆ

ಬಳಗದ ಸಾಂಸ್ಕೃತಿಕ ವಿಭಾಗದ ನೇತೃತ್ವದಲ್ಲಿ **7.8.2022 ಆದಿತ್ಯವಾರದಂದು ಮಕ್ಕಳಿಗಾಗಿ ವಿವಿಧ ಸ್ಪರ್ಧೆ**ಗಳನ್ನು ಏರ್ಪಡಿಸಲಾಗಿದೆ. **ಸ್ಥಳ : ಪೂರ್ಣಿಮಾ ರೀಜೆನ್ಸಿ,** #448, ಹೆಚ್. ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27

ವಿವರಗಳು ಹೀಗಿವೆ :

| | | | | |
|---|---|---|---|---|
| 1. | ಚಿತ್ರಲೇಖನ ಸ್ಪರ್ಧೆ | ಬೆಳಿಗ್ಗೆ | 10.00–11.30 | 6–12 ವರ್ಷ ಮತ್ತು 12–16 ವರ್ಷಗಳ ವರೆಗೆ |
| 2. | ಸಂಸ್ಕೃತ ಶ್ಲೋಕ ಪಠನ | ಬೆಳಿಗ್ಗೆ | 11.30–12.00 | 6 ವರ್ಷಗಳ ವರೆಗೆ (ಯಾವುದಾದರು ಸಂಸ್ಕೃತ ಶ್ಲೋಕ) 6–12 ವರ್ಷಗಳ ವರೆಗೆ (ಮಂಗಳಾಷ್ಟಕ/ ಕೃಷ್ಣಾಷ್ಟೋತ್ತರ/ ವೆಂಕಟೇಶ್ವರ ಸ್ತೋತ್ರ/ಭಗವದ್ಗೀತೆಯ 15ನೆಯ ಅಧ್ಯಾಯ) ಯಾವುದಾದರೂ ಹತ್ತು ಶ್ಲೋಕಗಳು |
| 3. | ದೇವರ ನಾಮ: | ಮಧ್ಯಾಹ್ನ | 12.00–12.30 | 12–16ವರ್ಷಗಳ ವರೆಗೆ |
| 4. | ದೇವರ ನಾಮ: | ಮಧ್ಯಾಹ್ನ | 12.30–01.00 | 6–12 ವರ್ಷಗಳ ವರೆಗೆ |
| 5. | ಪಿಕ್ ಎಂಡ್ ಸ್ಪೀಕ್ | ಮಧ್ಯಾಹ್ನ | 01.00–01.30 | 10–16 ವರ್ಷಗಳ ವರೆಗೆ |
| 6. | ಭೋಜನ ವಿರಾಮ | ಮಧ್ಯಾಹ್ನ | 01.30–02.00 | |
| 7. | ಭಾವಗೀತೆ/ಚಲನಚಿತ್ರಗೀತೆ | ಅಪರಾಹ್ನ | 02.00–02.45 | 12–16 ವರ್ಷಗಳ ವರೆಗೆ |
| 8. | ರಸಪ್ರಶ್ನೆ | ಅಪರಾಹ್ನ | 02.45–03.15 | 10–16 ವರ್ಷಗಳ ವರೆಗೆ |
| 9. | ಛದ್ಮವೇಷ: (ಫ್ಯಾನ್ಸಿಡ್ರೆಸ್) | ಅಪರಾಹ್ನ | 03.15–04.00 | 12 ವರ್ಷಗಳಿಗಿಂತ ಚಿಕ್ಕ ಮಕ್ಕಳಿಗೆ ಮಾತ್ರ |
| 10. | ವಾದ್ಯ ಸಂಗೀತ | ಸಂಜೆ | 04.00–05.00 | 10 ರಿಂದ 16 ವರ್ಷಗಳ ವರೆಗೆ |

**ಸೂಚನೆ: 1) ಪ್ರತಿಸ್ಪರ್ಧೆಯಲ್ಲಿ ಕನಿಷ್ಠ ಆರು ಸ್ಪರ್ಧಿಗಳು ಇದ್ದರೆ ಮಾತ್ರವೇ ಸ್ಪರ್ಧೆಯನ್ನು ನಡೆಸಲಾಗುವುದು.**
**2) ಛದ್ಮವೇಷದಲ್ಲಿ ವೇಷಭೂಷಣಗಳಿಗೇ ಪ್ರಾಮುಖ್ಯತೆ ಹೊರತು ಅಭಿನಯ ಮತ್ತು ಮಾತುಗಾರಿಕೆಗಲ್ಲ.**

ಬಳಗದ ಮಕ್ಕಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಭಾಗವಹಿಸಿ ಅವಕಾಶದ ಸದುಪಯೋಗ ಪಡೆಯಬೇಕಾಗಿ ವಿನಂತಿ. ಸ್ಪರ್ಧೆಯಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ತಮ್ಮ ಹೆಸರುಗಳನ್ನು ಕೆಳಗಿನ ಸಂಖ್ಯೆಗೆ, ದಿನಾಂಕ 6.8.2022ರ ಒಳಗಾಗಿ ಹೆಸರುಗಳನ್ನು ನೋಂದಾಯಿಸಬೇಕಾಗಿ ವಿನಂತಿ.

| | | | |
|---|---|---|---|
| **ಶ್ರೀಮತಿ ಸೌಮ್ಯ** | **ಶ್ರೀಮತಿ ಮಾಧವಿ ಬಲ್ಲಾಳ್** | **ಶ್ರೀಮತಿ ಗೀತಾ ಪಿ.ರಾವ್** | **ಶ್ರೀಮತಿ ಶೋಭಾರಾಧಾಕೃಷ್ಣ** |
| 9886200062 | 9986039107 | 9945938411 | 9844725547 |

# ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನ

ಬಳಗದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಪುರಸ್ಕರಿಸುವ ಯೋಜನೆಯಡಿಯಲ್ಲಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. **2022ರ ಮಾರ್ಚ್ /ಏಪ್ರಿಲ್ ತಿಂಗಳಲ್ಲಿ ನಡೆದ 10ನೇ ಮತ್ತು 12ನೇ ತರಗತಿಯ ಪರೀಕ್ಷೆಗಳಲ್ಲಿ ಅಧಿಕ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳು** ತಮ್ಮ ಹೆಸರು, ವಿಳಾಸ, ಬಳಗದ ಸದಸ್ಯರ ಜತೆ ತಮ್ಮ ಸಂಬಂಧ, ದೂರವಾಣಿ ಸಂಖ್ಯೆ ಇತ್ಯಾದಿ ವಿವರಗಳೊಂದಿಗೆ ಅಂಕಪಟ್ಟಿಯ ಪ್ರತಿಯನ್ನು ಆನಂದ ಬಳಗದ ಕಾರ್ಯಾಲಯಕ್ಕೆ 15–8–2022ರೊಳಗೆ ತಲುಪಿಸಬೇಕಾಗಿ ಕೋರುತ್ತೇವೆ.

| **ಪುರಸ್ಕಾರಕ್ಕಾಗಿ ಪರಿಗಣಿಸುವ ಅಂಕಗಳ ವಿವರ ಹೀಗಿದೆ :** | | | |
|---|---|---|---|
| **10ನೇ ತರಗತಿ** | : | **ಶೇ. 91ಕ್ಕಿಂತ ಹೆಚ್ಚು** | |
| **ಸಿಬಿಎಸ್‌ಸಿ** | : | **ಸಿಜಿಪಿಎ 9.6ಕ್ಕಿಂತ ಹೆಚ್ಚು** | |
| **ಐಸಿಎಸ್‌ಸಿ** | : | **ಶೇ. 91ಕ್ಕಿಂತ ಹೆಚ್ಚು** | |
| **12ನೇ ತರಗತಿ** | : | **ವಿಜ್ಞಾನ ಮತ್ತು ವಾಣಿಜ್ಯ** | **ಶೇ. 90ಕ್ಕಿಂತ ಹೆಚ್ಚು** |
| | | **ಕಲೆ** | **ಶೇ. 85ಕ್ಕಿಂತ ಹೆಚ್ಚು** |

ಪುರಸ್ಕಾರಕ್ಕೆ ಆಯ್ಕೆಯಾದವರಿಗೆ ದೂರವಾಣಿ ಮೂಲಕ ಮಾಹಿತಿ ನೀಡಲಾಗುವುದು. ಅರ್ಹತೆ ಆಧಾರದಲ್ಲಿ ಪುರಸ್ಕಾರಕ್ಕೆ ಗರಿಷ್ಠ ಸಂಖ್ಯೆಯನ್ನು ಸೀಮಿತಗೊಳಿಸುವ ತೀರ್ಮಾನ ಬಳಗದ ಆಡಳಿತ ಮಂಡಳಿಗೆ ಸೇರಿದೆ.

**● ಎಸ್. ಎನ್. ಶರತ್‌ಚಂದ್ರ ● ಶೋಭಾ ರಾಧಾಕೃಷ್ಣ ● ಬಿ.ಎಸ್. ಬಾಲಚಂದ್ರ ತೋಳ್ಪಾಡಿ**

# ಪ್ರತಿಭಾ ಮೇಳ ಮತ್ತು ಪುರಸ್ಕಾರ

ಬಳಗದ ಸಾಂಸ್ಕೃತಿಕ ವಿಭಾಗದ ಸಂಯೋಜನೆಯಲ್ಲಿ
**24.9.2022 ಶನಿವಾರ ಸಂಜೆ 4.25ರಿಂದ ಮಕ್ಕಳ ಪ್ರತಿಭಾ ಮೇಳ ಮತ್ತು ಪ್ರತಿಭಾ ಪುರಸ್ಕಾರ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

**ಸ್ಥಳ : ಎ.ಡಿ.ಎ. ರಂಗಮಂದಿರ,** ಜೆ.ಸಿ.ರಸ್ತೆ, ಬೆಂಗಳೂರು

**ಕಾರ್ಯಕ್ರಮಗಳು :**


* ಸಂಜೆ 3.30ರಿಂದ 4.15ರ ವರೆಗೆ ಲಘು ಉಪಾಹಾರ
* ಸಂಜೆ 4.25ಕ್ಕೆ ಸಭಾ ಕಾರ್ಯಕ್ರಮ
* ದಿನಾಂಕ 7.8.2022ರಂದು ನಡೆದ ಪ್ರತಿಭಾ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ
* 2021–22ರ ಸಾಲಿನಲ್ಲಿ 10ನೇ ಮತ್ತು 12ನೇ ತರಗತಿಯ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಪುರಸ್ಕಾರ ವಿತರಣೆ
* ಬಳಗದ ಮಕ್ಕಳಿಂದ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ

**ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಭಾಗವಹಿಸಿ ಬಳಗದ ಬಾಲಪ್ರತಿಭೆಗಳನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ.**

| | | |
|---|---|---|
| **ಬಾ. ರಾಮಚಂದ್ರ ಉಪಾಧ್ಯ** | **ಎ. ಸಂದೀಪ್ ರಾವ್** | **ಶ್ರೀಮತಿ ಶೋಭಾ ರಾಧಾಕೃಷ್ಣ** |
| ಅಧ್ಯಕ್ಷರು | ಕಾರ್ಯದರ್ಶಿ | ಸಂಚಾಲಕರು, ಸಾಂಸ್ಕೃತಿಕ ವಿಭಾಗ |



# ಗಣೇಶೋತ್ಸವ



ಬಳಗದ ಯುವ ವಿಭಾಗದ ನೇತೃತ್ವದಲ್ಲಿ **ದಿನಾಂಕ 4.9.2022 ಭಾನುವಾರದಂದು ಗಣೇಶೋತ್ಸವ**ವನ್ನು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಲಾಗಿದೆ.

**ಕಾರ್ಯಕ್ರಮದ ವಿವರಗಳು:**

* ಬೆಳಿಗ್ಗೆ 9 ಗಂಟೆಗೆ ದೇವತಾ ಪ್ರಾರ್ಥನೆ:
* ತ್ರಿನಾರೀಕೇಳ ಗಣಯಾಗ
* ಬೆಳಿಗ್ಗೆ 11.30ಕ್ಕೆ ಪೂರ್ಣಾಹುತಿ
* ಬಳಗದ ಸದಸ್ಯರಿಂದ ರಂಗೋಲಿ ಮತ್ತು ವಿಶೇಷ ಹೂವಿನ ಅಲಂಕಾರ
* ವಿಷ್ಣು ಸಹಸ್ರನಾಮ ಪಾರಾಯಣ
* ಸಮೂಹ ಭಜನೆ
* ಮಧ್ಯಾಹ್ನ 12.30 ಗಂಟೆಗೆ ಮಹಾಮಂಗಳಾರತಿ
* ಮಧ್ಯಾಹ್ನ 01.15 ರಿಂದ ಪ್ರಸಾದ ಭೋಜನ
* ಮಧ್ಯಾಹ್ನ 02.30 ಗಂಟೆಗೆ ವಿಶೇಷ ಚಂಡೆ ಮತ್ತು ನೃತ್ಯದೊಂದಿಗೆ ಗಣಪತಿ ವಿಸರ್ಜನೆ

**ಸ್ಥಳ : ಆನಂದ ಸಭಾಗೃಹ,** ಬನ್ನೇರುಘಟ್ಟ ರಸ್ತೆ, ಬೆಂಗಳೂರು

ಸರ್ವರಿಗೂ ಸ್ವಾಗತ ಬಯಸುವ

| | | |
|---|---|---|
| **ಬಾ.ರಾಮಚಂದ್ರ ಉಪಾಧ್ಯ,** | **ಎ.ಸಂದೀಪ್ ರಾವ್,** | **ಪ್ರಕಾಶ್ ಕೆ.ಭಟ್,** |
| ಅಧ್ಯಕ್ಷರು, ಆನಂದ ಬಳಗ | ಕಾರ್ಯದರ್ಶಿ, ಆನಂದ ಬಳಗ | ಸಂಚಾಲಕರು, ಯುವವಿಭಾಗ |

**ವಿಶೇಷ ಸೂಚನೆ: ಗಣೇಶೋತ್ಸವದಲ್ಲಿ ಭಾಗವಹಿಸುವ ಸದಸ್ಯರೆಲ್ಲರೂ ಕೋವಿಡ್ 19ರ ಸುರಕ್ಷಾ ವಿಧಿನಿಯಮಗಳನ್ನು ಪಾಲಿಸಬೇಕಾಗಿ ವಿನಂತಿ.**

# ಸಂಭ್ರಮದ ವಸಂತೋತ್ಸವ






**ಬೆಂಗಳೂರು:** ಆನಂದ ಬಳಗದ ಸಾಂಸ್ಕೃತಿಕ ಚಟುವಟಿಕೆಗಳು ಪ್ರಾರಂಭವಾಗುವುದು ವಸಂತೋತ್ಸವದ ಮೂಲಕ. ಆನಂದ ಬಳಗದ ಸಾಂಸ್ಕೃತಿಕ ವಿಭಾಗದ ವತಿಯಿಂದ ಈ ವರ್ಷವೂ 29.5.2022ಂದು ಬನ್ನೇರುಘಟ್ಟ ರಸ್ತೆಯ ಆನಂದ ಸಭಾಗೃಹದಲ್ಲಿ ಹೊಸ ಹುರುಪಿನಿಂದ ವಸಂತೋತ್ಸವ ಕಾರ್ಯಕ್ರಮವನ್ನು ಸಡಗರದಿಂದ ನಡೆಸಲಾಯಿತು.

ಸಂಜೆ 5 ಗಂಟೆಯಿಂದ ಶ್ರೀಮತಿ ಅಶ್ವಿನಿ ಭಟ್ ಅವರಿಂದ 30 ನಿಮಿಷಗಳ ಕಾಲ ನಡೆದ ವೀಣಾವಾದನ ಕಚೇರಿಯು ಸೇರಿದ ಸದಸ್ಯ ಬಳಗವನ್ನು ಮುದಗೊಳಿಸಿತು. ಬಳಿಕ ಶರಣ್ಯ ಗುರುನಂದನ್ ಅವರು ಸುಶ್ರಾವ್ಯವಾಗಿ ಕೃಷ್ಣ ಭಕ್ತಿಗೀತೆಯನ್ನು ಸಾದರ ಪಡಿಸಿ ಬಳಗವನ್ನು ರಂಜಿಸಿದರು. ಪಕ್ಕವಾದ್ಯದಲ್ಲಿ ಅವರ ಪತಿ




ಶ್ರೀ ಗುರುನಂದನ್ ಅವರು ತಬಲಾದಲ್ಲಿ, ರಿದಂ ಪ್ಯಾಡ್‌ನಲ್ಲಿ ಅವೋಘವರ್ಷ ಹಾಗೂ ವಯೋಲಿನ್‌ನಲ್ಲಿ ಅಭಯ್ ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿದರು.




ನಂತರ ಶ್ರೀಮತಿ ಸುಜಾತಾ ರಮೇಶ್ ಅವರ ಪ್ರಾರ್ಥನೆಯೊಂದಿಗೆ ಸಭಾ ಕಾರ್ಯಕ್ರಮವು ಪ್ರಾರಂಭ-ವಾಯಿತು. ಸಾಂಸ್ಕೃತಿಕ ವಿಭಾಗದ ಸಂಚಾಲಕಿ ಶ್ರೀಮತಿ ಶೋಭಾರಾಧಾಕೃಷ್ಣ ಗಣ್ಯರನ್ನು ಮತ್ತು ಸದಸ್ಯರನ್ನು ಸ್ವಾಗತಿಸಿದರು.

ಹೆಸರಾಂತ ಸಾಹಿತಿ ಶ್ರೀ ಜಿ.ವೆಂಕಟ ಸುಬ್ಬಯ್ಯನವರ ಪುತ್ರ ಶ್ರೀ ಜಿ.ವಿ.ಅರುಣ ಅವರು ಸಭೆಗೆ ವಿಶೇಷ ಅತಿಥಿಯಾಗಿ ಆಗಮಿಸಿದ್ದು ಅವರ ಪರಿಚಯವನ್ನು ಶ್ರೀ ರಮೇಶ್ ಭಟ್ ಅವರು ಅಚ್ಚುಕಟ್ಟಾಗಿ ಸಭೆಗೆ ಮಾಡಿಕೊಟ್ಟರು.

ಶ್ರೀ ಜಿ.ವಿ. ಅರುಣ ಅವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಬಳಗವು ಧಾರ್ಮಿಕ, ಸಾಂಸ್ಕೃತಿಕ, ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸಲ್ಲಿಸುತ್ತಿರುವ ಸೇವೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಬಳಗದ ಅಧ್ಯಕ್ಷ ಶ್ರೀ ರಾಮಚಂದ್ರ ಉಪಾಧ್ಯರು ಅಧ್ಯಕ್ಷ ಭಾಷಣದಲ್ಲಿ ಬಳಗದ ಹಲವಾರು ಚಟುವಟಿಕೆಗಳ ಬಗ್ಗೆ ಸ್ಥೂಲ ಪರಿಚಯ ನೀಡಿದರು.

ಶ್ರೀ ಜಿ.ವಿ. ಅರುಣ ಅವರನ್ನು ಬಳಗದ ವತಿಯಿಂದ ಆದರಪೂರ್ವಕವಾಗಿ ಗೌರವಿಸಲಾಯಿತು. ಬಳಗದ ಕಾರ್ಯದರ್ಶಿ ಶ್ರಿ ಸಂದೀಪ್ ರಾವ್ ವಂದನಾರ್ಪಣೆ ಮಾಡಿದರು. ವೇದಿಕೆಯಲ್ಲಿ ಸಾಲಂಕೃತ ಶ್ರೀಕೃಷ್ಣನಿಗೆ ನೈವೇದ್ಯ ಅರ್ಪಿಸಿ ಘಂಟೆ-ಚಂಡೆ ನಾದಗಳೊಂದಿಗೆ ಮಂಗಳಾರತಿ ಮಾಡಲಾಯಿತು. ಸಮಾಜ ಸೇವಾ ಸಂಚಾಲಕ ಶ್ರೀ ವೈ. ಜಯಂತ್‌ರಾವ್ ಶ್ರೀ ಕೃಷ್ಣನಿಗೆ ಪುಷ್ಪಾಲಂಕಾರ ಮಾಡಿ ಪೂಜೆ ನೆರವೇರಿಸಿದರು. ಪ್ರಸಾದ



ವಿನಿಯೋಗದ ಬಳಿಕ ವಸಂತ ಋತುವಿನ ವಿಶೇಷ ಫಲಾಹಾರದ ವ್ಯವಸ್ಥೆಯನ್ನು ಶ್ರೀ ವೆಂಕಟರಾಜ ಭಟ್ ಅವರ ಸಹಯೋಗದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಶ್ರೀಮತಿ ಸೌಮ್ಯ ಕೊಡಪ್ಪಾಡಿಯವರು ಸರಳಸುಂದರವಾಗಿ ನಿರೂಪಿಸಿದರು. ಕಾರ್ಯಕ್ರಮದ ಯಶಸ್ಸಿನಲ್ಲಿ ಬಳಗದ ಧಾರ್ಮಿಕ, ಯುವ ಮತ್ತು ಸಾಂಸ್ಕೃತಿಕ ವಿಭಾಗದ ಸದಸ್ಯರು ಹಾಗೂ ಬಳಗದ ಬಂಧುಗಳು ಸಹಕರಿಸಿದರು.

**– ವರದಿ : ಶ್ರೀಮತಿ ಶೋಭಾರಾಧಾಕೃಷ್ಣ**

# ಮನದಾಳ ಕವನ ಸಂಕಲನ ಬಿಡುಗಡೆ



**ಸಿದ್ಧಾಪುರ:** ಶ್ರೀಮತಿ ಜಿ.ಆರ್. ಜಯಲಕ್ಷ್ಮೀ ಆಚಾರ್ಯರ ಲೇಖನಿಯಲ್ಲಿ ಮೂಡಿಬಂದ ಸರಳ, ಸುಂದರ ಸಾಹಿತ್ಯವನ್ನೊಳಗೊಂಡ ಕವನ ಸಂಕಲನ ಮನದಾಳದ ಬಿಡುಗಡೆಯು ಇತ್ತೀಚೆಗೆ ಸಿದ್ಧಾಪುರದ ಕೆಳಪೇಟೆ ಶ್ರೀ ಅನಂತಪದ್ಮನಾಭ ಸಭಾಭವನದಲ್ಲಿ ನಡೆಯಿತು.


ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪಕಾಧ್ಯಕ್ಷ ಶ್ರೀ ಎ.ಎಸ್.ಎನ್. ಹೆಬ್ಬಾರ್ ಅವರು ಕೃತಿ ಬಿಡುಗಡೆ ಮಾಡಿದರು. ಹೆಚ್ಚಿನ ವಿದ್ಯಾಭ್ಯಾಸ ಮಾಡದೇ ಇದ್ದರೂ ಓದುವ ಹವ್ಯಾಸದೊಂದಿಗೆ ಬರವಣಿಗೆಯನ್ನೂ ರೂಢಿಸಿಕೊಂಡ ಶ್ರೀಮತಿ ಜಯಲಕ್ಷ್ಮೀ ಆಚಾರ್ಯರು ಬರೆದಿರುವ ಕವನ ಸಂಕಲನವು ವೈವಿಧ್ಯಮಯ ಕವಿತೆಗಳಿಂದ ಸಂಪನ್ನಗೊಂಡಿದೆ ಎಂದು ಅವರು ಶ್ಲಾಘಿಸಿದರು.

ಶುಭಾಶಂಸನೆ ಮಾಡಿದ ಬೆಂಗಳೂರಿನ ಆನಂದ ಬಳಗ ಮತ್ತು ದಕ್ಷಿಣ ಕನ್ನಡಿಗರ ಸಂಘದ ಅಧ್ಯಕ್ಷರಾದ ಶ್ರೀ ಬಾ.ರಾಮಚಂದ್ರ ಉಪಾಧ್ಯರು 70ರ ಆಸುಪಾಸಿನ ಹಿರಿಯ ಹರೆಯದಲ್ಲಿಯೂ ಶ್ರೀಮತಿ ಜಯಲಕ್ಷ್ಮೀ ಆಚಾರ್ಯರ ಬರೆಯುವ ಉತ್ಸಾಹ ಅಚ್ಚರಿ ಮೂಡಿಸುತ್ತದೆ. ಕೆಲವಾರು ಕವನಗಳು ಮನದಲ್ಲಿ ಚಿರಸ್ಥಾಯೀಗೊಳ್ಳುತ್ತವೆ. ಅವರ ಕೈಯಲ್ಲಿ ಇನ್ನಷ್ಟು ಕೃತಿಗಳು ಬರಲಿ. ಅವರಿಗೆ ಸಾಹಿತ್ಯ ಲೋಕದ ಉನ್ನತ ಪ್ರಶಸ್ತಿಗಳು ದೊರೆಯಲಿ ಎಂದು ಹಾರೈಸಿದರು.




ಅಧ್ಯಕ್ಷತೆ ವಹಿಸಿದ್ದ ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ನೀಲಾವರ ಸುರೇಂದ್ರ ಅಡಿಗರು ಶ್ರೀಮತಿ ಜಯಲಕ್ಷ್ಮೀ ಆಚಾರ್ಯರ ಕವಿತೆಗಳು ಸರಳಭಾಷೆಯಲ್ಲಿ ಮಕ್ಕಳಿಗೂ ಅರ್ಥವಾಗು–ವಂತಿದ್ದು, ಜ್ಞಾನಸಂಪನ್ನವಾಗಿವೆ. ಮುಂದಿನ ಬಾರಿ ಪಠ್ಯಪುಸ್ತಕ ಪರಿಷ್ಕರಣೆಯ ಸಂದರ್ಭದಲ್ಲಿ ಇವರ ಕವಿತೆಗಳನ್ನು ಪಠ್ಯಪುಸ್ತಕಗಳಲ್ಲಿ ಸೇರಿಸಲು ಶಿಫಾರಸು ಮಾಡುವೆ ಎಂದು ಹೇಳಿದರು. ಶ್ರೀ ವಿಶ್ವನಾಥ ಆಚಾರ್ಯರು ಸ್ವಾಗತಿಸಿದರು. ಶ್ರೀ ವಿನಯ ಆಚಾರ್ಯರು ವಂದಿಸಿದರು. ಶ್ರೀಮತಿ ಪೂರ್ಣಿಮಾ ಭಟ್ ನಿರೂಪಿಸಿದರು. ಕವಯಿತ್ರಿ ಶ್ರೀಮತಿ ಜಯಲಕ್ಷ್ಮೀ ಆಚಾರ್ಯರನ್ನು ಸಭೆಯಲ್ಲಿ ಗೌರವಿಸಲಾಯಿತು.

**ಯೌವನಂ ಧನಸಂಪತ್ತಿ ಅಧಿಕಾರಂ ಅವಿವೇಕಿತಾ।**
**ಏಕೈಕಮಪಿ ಅನರ್ಥಾಯ ಕಿಂ ಯತ್ರ ಚತುಷ್ಟಯಂ॥**



ತಾರುಣ್ಯದ ಶಕ್ತಿಯೂ, ಸಿರಿಯ ಸಮೃದ್ಧಿಯೂ, ಅಧಿಕಾರದ ಮದವೂ ಮತ್ತು ಅವಿವೇಕವೂ ಒಂದೊಂದಾಗಿ ಬಂದಾಗಲೇ ಮನುಷ್ಯನು ಅನರ್ಥದ ದಾರಿಯಲ್ಲಿ ನಡೆಯುವ ಸಾಧ್ಯತೆಗಳು ಬಹಳ. ಇನ್ನು ಇವೆಲ್ಲವೂ ಒಟ್ಟಾಗಿ ಬಂದರೆ ಪರಿಣಾಮ ಬಹಳ ಕೆಟ್ಟದ್ದಾಗಿರುತ್ತದೆ ಎಂಬುದು ಇದರ ಅಂತರಾರ್ಥ.

**– ಶ್ರೀಹರಿ**

# ಪ್ರೊ. ರಾಧಾಕೃಷ್ಣರಿಗೆ ಡಿ.ಲಿಟ್. ಪದವಿ



ಆನಂದ ಬಳಗದ ಹಿರಿಯ ಸದಸ್ಯರೂ, ಪ್ರಾಧ್ಯಾಪಕರೂ, ವಾಗ್ಮಿಗಳೂ, ಸಂಪನ್ಮೂಲ ವ್ಯಕ್ತಿಗಳೂ, ಉಪನ್ಯಾಸಕರೂ, ಅರ್ಥಧಾರಿಗಳೂ, ನಾಟಕಕಾರರೂ ಆಗಿರುವ ಪ್ರೊ.ಕೆ.ಇ.ರಾಧಾಕೃಷ್ಣ ಅವರಿಗೆ ತುಮಕೂರು ವಿಶ್ವವಿದ್ಯಾಲಯವು ಡಿ.ಲಿಟ್. ಪದವಿ ನೀಡಿ ಗೌರವಿಸಿದೆ.

ದಶರಥ ಲೋಕದ ಶೈಥಿಲ್ಯ, ರಾಮಲೋಕದ ಮರುನಿರ್ಮಾಣ, ಕಿಷ್ಕಿಂದೆಯ ಅತಂತ್ರ ರಾಜ್ಯ, ರಾವಣರಾಜ್ಯದ ಸರ್ವಾಧಿಕಾರ, ಮತ್ತು ಗುಹಲೋಕದ ಜನಪದೀಯ ಸುಖೀರಾಜ್ಯಗಳ ಬಗ್ಗೆ ವಿಶ್ಲೇಷಣೆಗಳನ್ನೊಳ–ಗೊಂಡಿರುವ ವಾಲ್ಮೀಕಿಯ ಶ್ರೀಮದ್ರಾಮಾಯಣ ಪ್ರಭುತ್ವ ಲೋಕ ಕಥನ ಎಂಬ ಸಂಶೋಧನಾ ಮಹಾಪ್ರಬಂಧಕ್ಕೆ ಈ ಪದವಿ ಪ್ರಾಪ್ತವಾಗಿದೆ. ವಾಲ್ಮೀಕಿ ವಿರಚಿತ ಮೂಲ–ರಾಮಾಯಣವು ಚಿತ್ರಿಸುವ ಆಡಳಿತಾತ್ಮಕ ಲೋಕಗಳನ್ನು ಆಧುನಿಕ ಜಗತ್ತಿನ ವಿಚಾರಗಳಿಗೆ ಮತ್ತು ಪಾರಂಪರಿಕ ನಡಾವಳಿಗಳಿಗೆ ಸಮನ್ವಯವಾಗುವಂತೆ ಸಂಶೋಧಿಸಿದ ಈ ಮಹಾ–ಪ್ರಬಂಧ ವಿದ್ವತ್ ಕ್ಷೇತ್ರದಲ್ಲಿ ಮಹತ್ವಪೂರ್ಣವಾದ ಗ್ರಂಥವಾಗಿದೆ.

ಪ್ರೊ.ರಾಧಾಕೃಷ್ಣರಿಗೆ ಆನಂದ ಬಳಗ ಮತ್ತು ಭೃಗುವಾಣಿಯ ಪರವಾಗಿ ಅಭಿನಂದನೆಗಳು.

# ಪುತ್ತೂರಾಯರಿಗೆ ಗೌರವಾರ್ಪಣೆ




ಕಳೆದ ನಾಲ್ಕು ದಶಕಗಳಿಂದ ಸಾವಿರಾರು ವೈದ್ಯ ವಿದ್ಯಾರ್ಥಿಗಳಿಗೆ ಬೋಧಿಸುತ್ತಾ ಅಧ್ಯಾಪನ ವೃತ್ತಿಯಲ್ಲಿ ಸಾರ್ಥಕತೆ ಮೆರೆದ **ಡಾ. ಕೆ.ಪಿ. ಪುತ್ತೂರಾಯ**ರನ್ನು ವೈದ್ಯರ ದಿನ 3.7.2022ರಂದು **ವಿಸಿಎನ್ ಡಾಕ್ಟರ್ಸ್ ವೆಲ್ಫೇರ್ ಅಸೋಸಿಯೇಶನ್** ವತಿಯಿಂದ ಸಚಿವ ಶ್ರೀ ವಿ.ಸೋಮಣ್ಣನವರ ಉಪಸ್ಥಿತಿಯಲ್ಲಿ ಗೌರವಿಸಲಾಯಿತು.

# ಕೆ.ಎನ್. ಅಡಿಗರಿಗೆ ಪ್ರಶಸ್ತಿತ್ರಯ


ವಿವಿಧ ಕ್ಷೇತ್ರಗಳಲ್ಲಿ ಸಕ್ರಿಯರಾಗಿರುವ ಬಳಗದ ಸಮಾಜಸೇವಾ ಸಂಚಾಲಕ **ಡಾ. ಕೆ.ಎನ್. ಅಡಿಗ**ರಿಗೆ ಕಳೆದ ಮೇ ತಿಂಗಳ 14 ಮತ್ತು 15ರಂದು 24 ಗಂಟೆಗಳಲ್ಲಿ **ರಂಗಕಲಾ ವೇದಿಕೆಯಿಂದ ಕನ್ನಡದ ಕಟ್ಟಾಳು ಪ್ರಸಸ್ತಿ, ತುಳುವೆರೆಂಕುಲು ಸಂಸ್ಥೆಯಿಂದ ಬಲಿಯೇಂದ್ರ ಪುರಸ್ಕಾರ ಮತ್ತು ವಿಶ್ವಚೇತನ ಬಳಗದಿಂದ ಪುನೀತ ಸೇವಾ ರತ್ನ** ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ.



ಶ್ರೀಯುತರಿಗೆ ಬಳಗವು ಅಭಿನಂದನೆಗಳನ್ನು ಸಲ್ಲಿಸುತ್ತದೆ.

# ವೇದಿಕೆಯನೇರಿದಾಗ

(ವೈಕುಂಠವಾಸಿ ಶ್ರೀ ಶ್ರೀ ವಿಶ್ವೇಶತೀರ್ಥರ ಅನುಗ್ರಹ ಸಂದೇಶ)



ಕೆಲಜನ ಯಾತ್ರಿಕರು ಉತ್ತರದ ಯಾತ್ರೆಗೆ ಹೊರಟಿದ್ದರು. ಮಧ್ಯಾಹ್ನದ ಬಿಸಿಲ ಬೇಗೆ. ಬಾಯಾರಿಕೆ–ಹಸಿವು ಎರಡೂ ಆಗಿತ್ತು. ದಾರಿಯ ಪಕ್ಕದಲ್ಲಿದ್ದ ಹಣ್ಣಿನ ತೋಟದೊಳಗಿನ ಮಣ್ಣಿನ ದಿಬ್ಬದ ಮೇಲೆ ನಿಂತಿದ್ದ ಓರ್ವ ವ್ಯಕ್ತಿ ಯಾತ್ರಿಕರನ್ನು ಕೈ ಬೀಸಿ ಕರೆದ.

'ಓ ಯಾತ್ರಿಕರೆ, ಬನ್ನಿ ಇದೋ, ಇದು ನಮ್ಮ ತೋಟ. ನೀವು ನಮ್ಮ ಅತಿಥಿಗಳು. ಬನ್ನಿ ವಿಶ್ರಮಿಸಿಕೊಳ್ಳಿ, ಹಣ್ಣು ತಿನ್ನಿ, ಬಾಯಾರಿಕೆ ನೀಗಿಸಿಕೊಳ್ಳಿ.'

ಅವನ ಸ್ವಾಗತಕ್ಕೆ ಸಂತಸಗೊಂಡ ಯಾತ್ರಿಕರ ತಂಡ ತೋಟದತ್ತ ತೆರಳಿತು. ಇನ್ನೇನು ತೋಟದೊಳಕ್ಕೆ ಕಾಲಿಡಬೇಕು. ಅಷ್ಟರಲ್ಲಿ ದಿಬ್ಬದಿಂದ ಇಳಿದಿದ್ದ ಅದೇ ವ್ಯಕ್ತಿ ಯಾತ್ರಿಕರನ್ನು ಗಟ್ಟಿಯಾಗಿ ಗದರಿಸತೊಡಗಿದ.

'ಯಾರು ನೀವು? ನಿಮಗೆಷ್ಟು ಧೈರ್ಯ? ಬೇರೆಯವರ ತೋಟಕ್ಕೆ ನುಗ್ಗಲು ನಿಮಗೆ ನಾಚಿಕೆಯಾಗದೇ? ಹೋಗಿ... ದೂರ..ಹೋಗಿ.'

ಯಾತ್ರಿಕರು ಹೆದರಿ ದೂರ ಸರಿದರು. ಮತ್ತೆ ದಾರಿಯಲ್ಲಿ ಮುಂದೆ ಸಾಗಲು ಹೊರಡುವಷ್ಟರಲ್ಲಿ ಅದೇ ವ್ಯಕ್ತಿಯೇ ಅದೇ ಮಣ್ಣಿನ ದಿಬ್ಬವನ್ನೇರಿ ನಿಂತು ಮತ್ತೆ ಸ್ವಾಗತ ಭಾಷಣ ಆರಂಭಿಸಿದ.

'ಬನ್ನಿ, ನಿಮಗೇಕೆ ಅಷ್ಟು ಸಂಕೋಚ? ಇದೆಲ್ಲ ನಿಮ್ಮದೇ, ಸಂಕೋಚವಿಲ್ಲದೇ ಬನ್ನಿ...ಆತಿಥ್ಯ ಸ್ವೀಕರಿಸಿ'

ಈ ಬಾರಿ ಯಾತ್ರಿಕರು ತೋಟದೊಳಗೆ ಹೋಗಲು ಅನುಮಾನಿಸಿದರು. ಆ ವ್ಯಕ್ತಿ ತುಂಬ ಒತ್ತಾಯಿಸಿ ಕರೆದ. ಇತ್ತ ಯಾತ್ರಿಕರಿಗೂ ಹಸಿವು, ನೀರಡಿಕೆ. ಸರಿ, ಕೊನೆಗೆ ಯಾತ್ರಿಕರೆಲ್ಲ ಮತ್ತೆ ತೋಟದತ್ತ ಹೊರಟರು. ಆ ವ್ಯಕ್ತಿ ದಿಬ್ಬ ಇಳಿದು ಬಂದು ತೋಟವನ್ನು ಪ್ರವೇಶಿಸುತ್ತಿದ್ದ ಯಾತ್ರಿಕರ ಗುಂಪನ್ನು ಕಂಡು ಚೆನ್ನಾಗಿ ಬಯ್ಯತೊಡಗಿದ. ಯಾತ್ರಿಕರಿಗೆಲ್ಲ ಬೆರಗಾಯಿತು. ಅವನು ಹುಚ್ಚನಿರಬೇಕೆಂದುಕೊಂಡರು. ಅವರ ಬೇರೆ ವರ್ತನೆಗಳನ್ನು ನೋಡಿದಾಗ ಅವನು ಹುಚ್ಚನಲ್ಲ ಎಂದೆನಿಸಿತು.

ಕೊನೆಗೆ ಅವರೆಲ್ಲ ಸೇರಿ ವಿಮರ್ಶಿಸಿ ಆ ಮಣ್ಣಿನ ದಿಬ್ಬವನ್ನು ಅಗೆದರಂತೆ. ಏನಚ್ಚರಿ! ಅದರ ಅಡಿಯಲ್ಲಿ ನ್ಯಾಯ–ಧರ್ಮಶೀಲನಾದ ಚಕ್ರವರ್ತಿ ವಿಕ್ರಮಾದಿತ್ಯನ ಸಿಂಹಾಸನವಿತ್ತಂತೆ!! ಅದಕ್ಕೇ ಆ ವ್ಯಕ್ತಿ ದಿಬ್ಬವನ್ನೇರಿ ನಿಂತಾಗ ಸ್ವಾಗತದ ಸವಿಮಾತುಗಳನ್ನಾಡಿದ. ಕೆಳಗೆ ಬಂದಾಗ ಅದಕ್ಕೆ ವಿಪರೀತವೇ!

ನಾವೂ ಅಂತೆಯೇ. ವೇದಿಕೆಯ ಮೇಲೆ ನಿಂತಾಗ ನ್ಯಾಯ, ಧರ್ಮ, ನೀತಿ, ಸತ್ಯದ ಬಗೆಗೆ ತುಂಬ ಮಾತನಾಡುತ್ತೇವೆ. ಕೆಳಗಿಳಿದಾಕ್ಷಣ ನಮ್ಮೆಲ್ಲ ಪ್ರವೃತ್ತಿಗಳೂ ಅದಕ್ಕೆ ವಿರುದ್ಧವಾಗಿಯೇ ಇರುತ್ತವೆ. ನ್ಯಾಯ–ಧರ್ಮಗಳು ಕೇವಲ ಉಪನ್ಯಾಸಕ್ಕಾಗಿ. ಆಚರಣೆಗಾಗಿ ಅಲ್ಲ ಎಂಬ ವರ್ತನೆ ನಮ್ಮದು. ನಡೆಯಲ್ಲೊಂದು, ನುಡಿಯಲ್ಲೊಂದು ಇದು ನಮ್ಮ ವಿಡಂಬನೆಯ ಕತೆ.

**(ಟಿ. ನಾರಾಯಣ ಭಟ್ಟರ 'ವಿಶ್ವಕಥಾಕುಂಜ' ಕೃತಿಯಿಂದ)**

## ಬ್ರಹ್ಮೋಪದೇಶ




ಶ್ರೀ ಅಡಿಗಳ್ ಮನೋಹರ ಭಟ್ ಮತ್ತು ಶ್ರೀಮತಿ ಶರಣ್ಯ ದಂಪತಿಗಳ ಸುಪುತ್ರ **ಚಿ. ವೈನತೇಯನ** (ಶ್ರೀ ಅಡಿಗಳ್ ಅನಂತಕೃಷ್ಣ ಭಟ್ಟರ ಮೊಮ್ಮಗ) ಬ್ರಹ್ಮೋಪದೇಶ ಸಮಾರಂಭವು ಮೂಡಬಿದಿರೆ ಪುತ್ತಿಗೆ ಅಂಗಣಿಮಾರ್ ಮನೆಯಲ್ಲಿ 17.6.2022, ಶುಕ್ರವಾರದಂದು ನಡೆಯಿತು

* * *

ಶ್ರೀ ಮಧುಕರ್ ಭಟ್ ಮತ್ತು ಶ್ರೀಮತಿ ಶೃತಿ ದಂಪತಿಗಳ ಸುಪುತ್ರ **ಚಿ. ಆಯುಷ್ಮಾನ್‌ನ** (ಶ್ರೀ ಅಡಿಗಳ್ ಅನಂತಕೃಷ್ಣ ಭಟ್ಟರ ಮೊಮ್ಮಗ) ಬ್ರಹ್ಮೋಪದೇಶ ಸಮಾರಂಭವು ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠದ ಶ್ರೀ ಕೃಷ್ಣನ ಸನ್ನಿಧಾನದಲ್ಲಿ ನಡೆಯಿತು.



# Sri Krishna Sevashrama Hospital



No. 523, 10th Main, 45th Cross, 5th Block, Jayanagar, Bengaluru - 560 041.

**Most popular neighborhood hospital located in South Bangalore with 75 beds offering quality medical care at affordable cost.**

## Specalities

- General Medecine
- General Surgery
- Obsterics & Gynaecology
- Paediatrics
- Orthopaedics & Trauma
- Diabetes & Endocrinology
- Urology
- Rheumatology
- Laparoscopic Surgery
- Ophthalmology
- Dermatology
- ENT & Head & neck Surgery
- Vascular Surgery
- Nephrology
- Neurology
- Psychiatry

## Services

- Dental Unit
- Dialysis Unit
- Laboratory Services
- X-Ray & Ultrasound
- Physiotherapy
- Endoscopy
- MICU & PICU
- Home care Service
- Ayurveda
- Pharmacy

**Donations Accepted (80g Exemption)**

**Contact for more information and patient referral**

**Ph No: 080 4534 0000 Email: sevashramahospital@gmail.com**



# Sri Vishwesha Theertha Memorial Hospital



**(A unit of Sri Krishna Sevashrama Trust)**

**NEW HEALTHCARE FACILITY**

For economically poor patients at Marathahalli Whitefield Bangalore

Construction is rapidly progressing of this 100 bedded Multispecialt offering the best in healthcare at affordable rates




Under the leadership of **H H Sri Vishwaprasanna Theertha Swamiji**, Sri Krishna Sevashrama Trust is determined to complete this dream project of Late **H H Sri Vishwesha Theertha Swamiji**

Donations are welcome from munificent donors and philanthropic organizations

For details, please contact Mr. Manjunath - +91 90358 21223


ಹಾರ್ದಿಕ ಶುಭಾಶಯಗಳೊಂದಿಗೆ

ಹೋಟೆಲ್ ಅಜಂತಾ ಆತಿಥ್ಯಸೇವಾ ಸಮೂಹ


HOTEL AJANTHA GROUP OF HOSPITALITY SERVICES

# HOTEL AJANTHA

A Boarding and Lodging Hotel of repute with spacious place for parking
Party Halls and all facilities









No.22/A, Mahatma Gandhi Road, Bangalore - 560 001
Phone : 25584321 Fax : 080 - 2558 4780 | Email : bagilthaya@vsnl.com


# AJANTHA TRINITY INN


**Luxurious Rooms for Comfortable Stay**

## Our Facilities

- Single Bed
- Hot Water
- Double Bed
- Mineral Water
- Air Conditioner
- Free Wifi



**YOUR SATISFACTION - OUR MOTTO**

ನಿಮ್ಮ ಸಂತೃಪ್ತಿಯೇ ನಮ್ಮ ಧ್ಯೇಯ

Trinity Circle, Mahatma Gandhi Road, Bangalore - 560 001
Phone : 25559491 - 5 Lines

*With best compliments*

# FIRETECH
## BOILERS PRIVATE LTD.
(An ISO 9001 : 2015 Certified Company)

**Office:** "FIRETECH HOUSE" , No. 211, 2nd Cross, 38th Main, B.T.M Layout, 2nd Stage, Bangalore - 560 068, Karnataka. Ph.: 080-26683686 / 26683921, Mob. : 73384 87934

**Works:** 121/C2,Bommasandra Industrial Area, Anekal Taluk, Bangalore - 560 099, Karnataka. Ph.: 080-27834189


E-mail : firetechhouse@gmail.com

Website : www.firetechboilers.com

## *Manufacturing Steam Boilers (IBR & Non IBR)*

- Thermic Fluid Heaters
- Hot Air Generators
- Waste Heat Boilers
- Agro Dryers





- Heat Exchanger
- MDC
- Accumulator etc.,








ತಾತ್ವಿಕವಾಗಿ ತ್ವರಿತ ಮಂಜೂರಾತಿ

ಗ್ರಾಹಕರ ರಿಯಲ್ ಟೈಮ್ ದೃಢೀಕರಣ

ಅಡಚಣೆ ರಹಿತ ದಾಖಲಾತಿ ಪ್ರಕ್ರಿಯೆ

ನಮ್ಮ ಗ್ರಾಹಕರಿಗೆ
**ಡಿಜಿಟಲ್ ಸಾಲ**
ಅನುಭವದ ಸಬಲೀಕರಣ

ಸ್ವಯಂಚಾಲಿತ ಸಾಲ ಮೌಲ್ಯಮಾಪನ & ಅರ್ಹತೆ

ಆಕರ್ಷಕ ಬಡ್ಡಿ ದರಗಳು

ಸರಳೀಕೃತ ಪ್ರಕ್ರಿಯೆ

ಹೆಚ್ಚಿನ ವಿವರಗಳಿಗೆ ಟೋಲ್ ಫ್ರೀ ನಂ. 1800 425 1444 ಕರೆ ಮಾಡಿ ಅಥವಾ ಸಮೀಪದ ನಮ್ಮ ಶಾಖೆಗೆ ಭೇಟಿ ಕೊಡಿ

*ಷರತ್ತುಗಳು ಅನ್ವಯ

Follow us on : / KarnatakaBank

**ಕರ್ನಾಟಕ ಬ್ಯಾಂಕ್**
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 | CIN: L85110KA1924PLC001128 | ಇಮೇಲ್: info@ktkbank.com | ವೆಬ್‌ಸೈಟ್: www.karnatakabank.com


*Best Compliments from*

# Hotel Dwaraka

**Anand Rao Circle, Bangalore - 560 009**

## Late N.R. Narayana Rao

Managing Partner




# ವಸತಿ ಗೃಹ

ನಮ್ಮ ವಿಶೇಷತೆಗಳು
ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ,
ಬೆಳಕಿರುವ, ನಿರಂತರ ನೀರು ವಿದ್ಯುತ್ ಸರಬರಾಜಿರುವ,
ಅತಿ ಹೆಚ್ಚಿಲ್ಲದ ಬಾಡಿಗೆಯಿರುವ, ವಿಶಾಲವಾದ ಕೊಠಡಿಗಳು,
ಮನಸ್ಸಿಗೆ ಶಾಂತಿ ನೆಮ್ಮದಿ ತರುವ ಶಾಂತ ವಾತಾವರಣ,
ನಮ್ರತೆಯ ಸೇವೆ, ಎಸ್.ಟಿ.ಡಿ./ಐ.ಎಸ್.ಡಿ.
ಮತ್ತು ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ

ದೂರವಾಣಿ : 22265011 (8 ಮಾರ್ಗಗಳು),
22268263, 22268264

FRIDGE HOUSE
DELIVERING TRUST

# FRIDGE HOUSE

## Wholesaler & Importers

EMERSON
Climate Technologies
AUTHORIZED FULL-LINE WHOLESALER

**M/s Emerson Commercial & Residential Solutions**

DAIKIN

**Dealers: M/s. Daikin Air Conditioning India Pvt Ltd**
(Spare Parts for Air Conditioner)

**M/s. Gujarat Flurochemicals Ltd.**

GFL



Scroll



Sealed



Semi Hermetic



Scroll Condensing Unit



Dixell Controls



Tie



Fan & Motor



Split AC



Copper pipes & Insulation Materials

**EQUIPMENTS & COMPONENTS. for**

***HVAC & R, *COLD ROOMS, *RIPENING CHAMBERS, *HEAT PUMPS.**

Adithya Tower # 23, V.S.N Road, Shivaji Nagar, Bengaluru - 560 051.
Ph. No. 080-22861936, 22860260 & 41238022
Email : info@fridgehouse.net ; Web Site: www. fridgehouse.net
Contact Persons : M.K. Prasad & Nagesh D Prabhu - M: 9845217197

*With Best Compliments from :*

## Hotel Sheetal

#32/12, Sheshadri Road
Ananda Rao Circle
Bangalore - 560 009
Ph : 41139560 - 64 | Mobile : 98457 77381







- Food and Drink : Restaurant, Room Service
- Services : Front Door 24x7, Baggage Storage, Lift
  Full-service laundry, House keeping
- Non AC Rooms, Private Bathroom

## Sheetal Residency

#3/1, Old Sawar Lane, Sheshadri Road
Near Sangolli Rayanna Circle
Bangalore - 560 009
Ph : 080 2234 3777 / 80 / 81





- Free Breakfast
- Near Public Transport
- Great Rooms (A/C)
- Great Service
- Free Wi-Fi
- Parking Area

info@sheetalresidency.com www.sheetalresidency.com

ಎ. ಪ್ರಭಾಕರ ರಾವ್, ಮ್ಯಾನೇಜಿಂಗ್ ಪಾರ್ಟ್‌ನರ್

---

ಶುಭಾಶಯಗಳನ್ನು ಕೋರುವವರು,

॥ ಹರಿಃ ಓಂ ॥

# ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)

ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.
ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ
(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

## ಉಪಾಧ್ಯ ಆಯುರ್ವೇದ ಭಂಡಾರ

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ : 389, ಮಹಾಕವಿ ಕುವೆಂಪು ರಸ್ತೆ
ನಾಗಪ್ಪ ಬ್ಲಾಕ್, ಬೆಂಗಳೂರು – 21

*With Best Compliments from :*

# P.C. RAO

RISPL
Rao Ideal Services Pvt Ltd

# Rao Ideal Services Pvt Ltd

***Specialists in Staff Outsourcing and Facility Management***

We are specialized in Environmental Maintenance, Staff Outsourcing, Statutory Support, and other corporate services in different sectors like Automobile, Consumer Durable, Healthcare / Medical / R &D, Industrial Products / Heavy Machinery, Manufacturing, Purchase / Logistics / Supply Chain, Hotels Industry, Packaging etc.

---

No. 63, 5th Cross, Vasanth Nagar
Bangalore - 560 052

+91 - 98444 94630
raoideal@yahoo.co.in

**M. K. Gurumurthy**

# G. S. POWER SYSTEMS

**Authorised Dealers For :**

**kirloskar Diesel Generators from 2 KVA to 1500 KVA**

**Since 35 Years.**



**Available Generators for Hiring / Rental**

**#21, 100 Ft. Ring Road, 3rd Cross, 3rd Phase, 6th Block, Banashankari**
**Opp. Brnad Factory, Near Kamakya Theatre, Bangalore - 560 085**
**Phone : 080-26893606 / 26893607**
**Mobile : 9844022692, 7760998652**
**E-mail: info@gspowersystems.com/gspowerblr@gmail.com**

**www.gspowersystems.com**

# Stock Markets in Bear Phase. Good luck for Investors !



Mr. Rohan Bharath Chandra

**One of our Viewers of our Youtube Videos sent the following message.- ಸರ್ ಪ್ರತಿ ದಿನ ನಿಮ್ಮ video ನೋಡುತ್ತ. 15 ಉತ್ತಮವಾದ ಶೇರುಗಳನ್ನು 2021ರಲ್ಲಿ ಖರೀದಿಸಿದ್ದೇನೆ. ಈಗ ಸ್ವಲ್ಪ loss ಇದೆ. ಆದರೂ ಪ್ರಾರಂಭದಲ್ಲೇ bear market ಬಂದಿದ್ದು ನನ್ನ ಪುಣ್ಯ. ಯಾಕಂದ್ರೆ ಮುಂದೆ ಒಳ್ಳೆಯ ಲಾಭ ಬರುವ ಸಾಧ್ಯತೆ ಇರುತ್ತದೆ.**

**Based on this, we did Research for the period 2000 to 2022 to see how many years has Nifty closed positive in a Calendar Year and how many years negative. Also, we calculated the same information for Asian Paints Shares.**

| Sl. No | Calendar Year | Approx % Change in Nifty | % Change in Asian Paints Price |
|---|---|---|---|
| 1 | 2000 | -11 | -9 |
| 2 | 2001 | -22 | -1 |
| 3 | 2002 | -3 | 24 |
| 4 | 2003 | 74 | 48 |
| 5 | 2004 | 14 | 12 |
| 6 | 2005 | 46 | 71 |
| 7 | 2006 | 36 | 30 |
| 8 | 2007 | 26 | 57 |
| 9 | 2008 | -44 | -37 |
| 10 | 2009 | 70 | 134 |
| 11 | 2010 | 14 | 39 |
| 12 | 2011 | -6 | 16 |

| Sl. No | Calendar Year | Approx % Change in Nifty | % Change in Asian Paints Price |
|---|---|---|---|
| 13 | 2012 | 16 | 50 |
| 14 | 2013 | 1 | 5 |
| 15 | 2014 | 45 | 82 |
| 16 | 2015 | -14 | 1 |
| 17 | 2016 | 13 | 11 |
| 18 | 2017 | 29 | 16 |
| 19 | 2018 | -2 | 25 |
| 20 | 2019 | 10 | 27 |
| 21 | 2020 | 14 | 34 |
| 22 | 2021 | 27 | 31 |
| 23 | 2022 (so far) | -9 | -12 |
| | | | |

**Observations:**

1. Including 2022, out of 23 years, Nifty closed negative in only 8 Calendar years. This is 35% of all the years. Even out of the 8 negative years, on 4 occasions Nifty has fallen by single digit percentage and hence could be considered positive. This means that only around 20% of the times, Nifty closes negatively in a given Calendar Year.
2. The data for Asian Paints shows that it has closed negatively only 4 times in the last 23 years which is 17% of the total.
3. One statistics which is true is that in the long term (5 years plus), Stock Market index such as Nifty is likely to be higher. However, all individual Stocks may not appreciate. It all depends on the Fundamentals of the companies you invest in. That is why it is said that "Stock Markets appreciate in the long term, but all investors do not make Money."
4. Experiencing Bear phase early in your Investment journey will help you learn more about Stock Markets rather than starting with a Bull Market when all Stocks are going up irrespective of the Fundamentals of the company. Investors who started in 2020 and 2021 saw Bull phase and many became over-confident.
5. It is best to invest every month as SEP (Systematic Equity Plan). However, apart from that, it is always profitable to invest in good Stocks in Bear phase when Stock prices are low since it will help in earning more Profits in the long term.

***- Article by***

**- Dr. Bharath Chandra & Mr. Rohan Bharath Chandra**
***(Internationally acclaimed Personal Finance Coaches).***

# WELCOME NEW MEMBERS OF BALAGA

At present the total membership of Ananda Balaga is 2126 and as follows,

| | | |
|---|---|---|
| Life Members | : | 899 |
| Dhani Members | : | 632 |
| Mahadhani Members | : | 543 |
| Poshaka Members | : | 34 |
| Mahaposhaka Members | : | 18 |

**The following is the list of new members who joined Ananda Balaga during the period from 01/07/2021 to 31/03/2022, under the convenorship of Mr M.Krishna Prasad, 98450 18183.**

| Sl No | Name | Membership No | Sl No | Name | Membership No |
|---|---|---|---|---|---|
| 1 | Ms. Roopa Shastry | Md0491 | 17 | Mr. Sampath Kumar P. | Md0506 |
| 2 | Mr. Santosh Bhat N.J. | MD0492 | 18 | Ms. Smitha Bhat | Md0507 |
| 3 | Mr. K. Krishna Murthy Mayya | Md0493 | 19 | Mr. Kartikeya Muchinthaya | Md0508 |
| 4 | Ms. Shoba Umesh Rao | Md0494 | 20 | Dr. Hariram Someshwar | Md0509 |
| 5 | Mr. Prasanna Melanta | Md0495 | 21 | Ms. Sameera B. Markod | Md0510 |
| 6 | Mr. Ravindra Puthuraya | Md0496 | 22 | Ms. Lakshmi N. | Md0511 |
| 7 | Mr. Dinesh Rao M. | Md0497 | 23 | Mr. B. Shreesha Kumar | MD0512 |
| 8 | Mr. Ravishankar Hebbar | Md0497 | 24 | Mr. Lakshmi Kumar K.S. | MD0513 |
| 9 | Mr Srikanth P. K. | MD0498 | 25 | Mr. Manjunath S. | Md0514 |
| 10 | Dr. Achuytha Hebbar H.S. | MD0499 | 26 | Mr. P.N. Shashidhar Rao | MD0515 |
| 11 | Mr. Nithin Bhat B. | Md0500 | 27 | Mr. Aravind Shastri | Md0516 |
| 12 | Dr. Vikram Kukkadi | Md0501 | 28 | Dr. Nikhil Das B | Md0517 |
| 13 | Ms. Apeksha R. Bhat | Md0502 | 29 | Mr. K Vasudeva Udupa | Md0518 |
| 14 | Mr. Sudheendra Rao M.B. | MD0503 | 30 | Mr. C.N. Nagesh | MD0519 |
| 15 | Ramesh S. Koteshwara | Md0504 | 31 | Mr. Vasanth Bhat K. | Md0520 |
| 16 | Mr. Rajesh Rao P. | Md0505 | 32 | Mr. Balakrishna P.A. | MD0521 |

**ಪಂಚ ಪ್ರಪಂಚ**


* ಪಂಚಾಮೃತ
  ಹಾಲು, ಮೊಸರು, ತುಪ್ಪ, ಜೇನುತುಪ್ಪ, ಕಬ್ಬಿನಹಾಲು
* **ಪಂಚಗವ್ಯ**
  ಗೋಮೂತ್ರ, ಗೋಮಯ, ಹಾಲು, ಮೊಸರು, ತುಪ್ಪ
* **ಪಂಚೇಂದ್ರಿಯ**
  ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ
* **ಪಂಚವರ್ಣ**
  ಬಿಳಿ, ಹಳದಿ, ಕೆಂಪು, ಹಸಿರು, ಕಪ್ಪು

# ENGINEERING CONSULTANCY SERVICES FOR CONSTRUCTIONS

## CRUTHI CONSULTANTS CONSORTIUM (P) LTD

Services Offered :

**In :**
* Structural Engineering
* Civil Consultancy
* Project Management
* Water & Sewerage, Fire etc.
* Electrical & Security
* HVAC & Networking



**For :**
* IT Industry
* Factories,
* Institutions
* Hotels and Resorts
* Commercial &
* Residential

No. 204, 2nd Main Road, 4th Block
Rajajinagar, Bangalore – 560 010
Tel: +91 80 2315 2014, 99456 66306
Fax: +91 80 4128 2207
Email: Info@cruthi.com,
Website: www.cruthi.in

Mr. Dinesh Rao Mundruppady
99456 88955
Mr. Vasudevan T S
98450 26743
Mr. Vijay Kumar Kulkarni
99456 96649




## ಬೇಕಾಗಿದ್ದಾರೆ



**ಸಾಹಿತ್ಯದ ಅಭಿರುಚಿ,**
**ಬರವಣಿಗೆಯ ಆಸಕ್ತಿ ಉಳ್ಳ**
ಜೆ.ಪಿ. ನಗರದಲ್ಲಿ ವಾಸವಿರುವವರು

ಸಂಪರ್ಕಿಸಿ:
ತಮ್ಮ ಮಾಹಿತಿ ವಿವರಗಳನ್ನು
**ishudhi@gmail.com**
ಗೆ ಕಳುಹಿಸಬಹುದು.





**Flat for Sale**

## Apartment DS Max Swastik

Flat no. B 332
Location-Turahalli,
uttarahalli hobli

Area - 1381 sq ft
Facing – North with forest view
Balcony Facing Turahalli forest
1 utility balcony
1 covered Car Park included
1 room with wardrobe
1 room with wardrobe and lofts
1 room passage with wardrobe and lofts
Kitchen modular furnished
Value : Rs.55 lac. Negotiable
Ready to occupy
**Contact Mob.No. :**
**94482 74519/ 98860 46194**

# ಸಮಾಜಕ್ಕಾಗಿ ಬದುಕಿದ ಆದರ್ಶ ಮಹನೀಯ

## ಶತಮಾನದ ಪುಣ್ಯಪುರುಷ ಡಾ.ಪಿ.ಜೆ.ಬಾಗಿಲ್ತಾಯರ ಜನ್ಮಶತಾಬ್ದಿ

ಆನಂದ ಬಳಗ, ದಕ್ಷಿಣ ಕನ್ನಡಿಗರ ಸಂಘ, ಪೂರ್ಣಪಜ್ಞ ವಿದ್ಯಾಪೀಠ, ಪೂರ್ಣಪ್ರಜ್ಞ ಶಿಕ್ಷಣ ಟ್ರಸ್ಟ್, ಶ್ರೀ ಕೃಷ್ಣ ಸೇವಾಶ್ರಮ ಆಸ್ಪತ್ರೆ, ವೃದ್ಧಾಶ್ರಮ ಮೊದಲಾದ ಹಲವಾರು ಸಂಘ ಸಂಸ್ಥೆಗಳಿಗೆ ಆಶ್ರಯ ನೀಡಿ, ಪೋಷಿಸಿ, ಅವುಗಳ ಬೆಳವಣಿಗೆ ಮತ್ತು ಏಳಿಗೆಗಾಗಿ ಅನುಪಮ ಸೇವೆ ಸಲ್ಲಿಸಿದ್ದ ದಿವಂಗತ ಡಾ.ಫಲಿಮಾರು ಜಯರಾಮ ಬಾಗಿಲ್ತಾಯರ ಜನ್ಮಶತಾಬ್ದಿಯನ್ನು ಆನಂದ ಬಳಗ ಮತ್ತು ದಕ್ಷಿಣ ಕನ್ನಡಿಗರ ಸಂಘದ ಸಂಯುಕ್ತಾಶ್ರಯದಲ್ಲಿ 30–4–2022ರಂದು ಹೋಟೆಲ್ ವುಡ್‌ಲ್ಯಾಂಡ್ಸ್ ನ ಶ್ರೀಕೃಷ್ಣ ಸಭಾಂಗಣದಲ್ಲಿ ಆಚರಿಸಲಾಯಿತು.



ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ಕಾರ್ಯಕ್ರಮದ ದಿವ್ಯಸಾನ್ನಿಧ್ಯವನ್ನು ವಹಿಸಿದ್ದರು. ಪೂಜ್ಯ ಸ್ವಾಮೀಜಿಯವರು ತಮ್ಮ ಅನುಗ್ರಹ ಭಾಷಣದಲ್ಲಿ 'ದಿವಂಗತ ಜಯರಾಮ ಬಾಗಿಲ್ತಾಯರು ತಮಗಾಗಿ ಬದುಕಲಿಲ್ಲ, ಸಮಾಜದ ಏಳಿಗೆಗಾಗಿ ಬದುಕಿದವರು. ಇಂತಹ ಆದರ್ಶಪುರುಷರ ಜನ್ಮಶತಾಬ್ದಿ ಆಚರಣೆಯು ಅರ್ಥಪೂರ್ಣ ಎಂದು ಹೇಳಿ ಇದಕ್ಕಾಗಿ ಕಾರ್ಯಕ್ರಮ ಸಂಯೋಜಕರನ್ನು ಅಭಿನಂದಿಸಿದರು.



ನೆನಪು ನಮನ ಸಮಾರಂಭದಲ್ಲಿ ನಿವೃತ್ತ ಐ.ಎ.ಎಸ್. ಅಧಿಕಾರಿ ಶ್ರೀ ಟಿ.ಶ್ಯಾಮ ಭಟ್, ಮಾಜಿ ಅಡ್ವೋಕೇಟ್ ಜನರಲ್ ಡಾ.ಬಿ.ವಿ. ಆಚಾರ್ಯ, ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್, ಧರ್ಮಸ್ಥಳದ ಪ್ರತಿನಿಧಿ ಶ್ರೀ ಡಿ.ಸುರೇಂದ್ರ ಕುಮಾರ್, ವಾಗ್ಮಿ, ಚಿಂತಕ ಪ್ರೊ.ಕೆ.ಪಿ.ಪುತ್ತೂರಾಯ, ಶಿಕ್ಷಣತಜ್ಞರಾದ ಪ್ರೊ.ಕೆ.ಇ.ರಾಧಾಕೃಷ್ಣ ಮತ್ತು ಪ್ರೊ.ಶ್ರೀಹರಿ ಅತಿಥಿಗಳಾಗಿ ಪಾಲ್ಗೊಂಡು ಬಾಗಿಲ್ತಾಯರ ಒಡನಾಟವನ್ನು ಮೆಲುಕು ಹಾಕಿ ಅವರ ಜೀವನ ನಮಗೆಲ್ಲಾ ಆದರ್ಶ ಹಗೂ ಸ್ಫೂರ್ತಿದಾಯಕ ಎಂದು ಅಭಿಪ್ರಾಯಪಟ್ಟರು.

ಸಮಾರಂಭದ ಅಧ್ಯಕ್ಷತೆಯನ್ನು ಆನಂದ ಬಳಗ ಹಾಗೂ ದಕ್ಷಿಣ ಕನ್ನಡಿಗರ ಸಂಘದ ಅಧ್ಯಕ್ಷರಾದ ಶ್ರೀ ರಾಮಚಂದ್ರ ಉಪಾಧ್ಯರು ವಹಿಸಿದ್ದರು. ಕಾರ್ಯಕ್ರಮದ ಮೊದಲಿಗೆ ಆನಂದ ಬಳಗದ ಮಹಿಳಾ ವಿಭಾಗದಿಂದ ಭಕ್ತಿಸುಧೆ ಮತ್ತು ಕರ್ನಾಟಕ ಮಹಿಳಾ ಯಕ್ಷಗಾನ ತಂಡದಿದ ಲವಕುಶ ಯಕ್ಷಗಾನ ಬಯಲಾಟವನ್ನು ಏರ್ಪಡಿಸಲಾಗಿತ್ತು.

ಇದೇ ವೇಳೆ ಯುಗಾದಿ ಸಂಭ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ವಿಷುಪೂಜೆ ಮತ್ತು ಪಂಚಾಂಗ ಶ್ರವಣವನ್ನು ವಿದ್ಯುಕ್ತವಾಗಿ ನಡೆಸಲಾಯಿತು.

ಸಮಾರಂಭದಲ್ಲಿ ದಕ್ಷಿಣ ಕನ್ನಡಿಗರ ಸಂಘದ ಉಪಾಧ್ಯಕ್ಷರಾದ ಡಾ.ಕೆ.ಸಿ.ಬಲ್ಲಾಳರು ಸ್ವಾಗತಿಸಿದರು, ಕಾರ್ಯದರ್ಶಿ ಶ್ರೀ ವೈ.ಜಯಂತ ರಾವ್ ವಂದನಾರ್ಪಣೆ ಮಾಡಿದರು. ಆನಂದ ಬಳಗದ ಉಪಾಧ್ಯಕ್ಷರಾದ ಶ್ರೀ ಎಸ್.ಹರಿದಾಸ ಉಪಾಧ್ಯಾಯರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಡಾ.ವೀಣಾ ಶರತ್ ಕಾರ್ಯಕ್ರಮವನ್ನು ನಿರೂಪಿಸಿದರು. ಸಮಾರಂಭದ ನಂತರ ಹೋಟೆಲ್ ವುಡ್ಲ್ಯಾಂಡ್ಸ್‌ನ ಸಹಯೋಗದಲ್ಲಿ ಭರ್ಜರಿ ಭೋಜನದ ವ್ಯವಸ್ಥೆಯನ್ನು ಮಾಡಲಾಗಿತ್ತು

### ಗೃಹಪ್ರವೇಶ

ಬಳಗದ ಸಕ್ರಿಯ ಸದಸ್ಯರಾದ ಶ್ರೀ ಕೆ.ಸುದರ್ಶನ ಮತ್ತು ಶ್ರೀಮತಿ ಸ್ವಪ್ನ ದಂಪತಿಗಳು ಬನಶಂಕರಿ 3ನೇ ಹಂತದ ಇಟ್ಟಮಡುವಿನ ನಿತಿನ್ ಹೈಟ್ಸ್‌ನಲ್ಲಿ ಖರೀದಿಸಿರುವ ನೂತನ ಫ್ಲಾಟ್ ಶ್ರೀ ಗುರುವಾದಿರಾಜ ನಿಲಯದ ಪ್ರವೇಶ ಸಮಾರಂಭವು ತಾ. 15–7–2022ರಂದು ವಿಧ್ಯುಕ್ತವಾಗಿ ನೆರವೇರಿದೆ. ಶ್ರೀ ಸುದರ್ಶನ ದಂಪತಿಗಳಿಗೆ ಅಭಿನಂದನೆಗಳು.

# ತುಳಸಿಯ ಔಷಧೀಯ ಉಪಯೋಗಗಳು



ನಮ್ಮ ಸನಾತನ ಪರಂಪರೆಯಲ್ಲಿ ಪೂಜನೀಯ–ವಾಗಿರುವ ತುಲಸಿಗಿಡವು ಪ್ರತಿಯೊಬ್ಬರ ಮನೆಗಳಲ್ಲಿಯೂ ಸಾಮಾನ್ಯವಾಗಿ ಇರುವಂತಹ ಸಸ್ಯವಾಗಿದೆ. ಸುರಸಾ, ದೇವದುಂದುಭೀ, ಭೂತಪ್ರಿಯ, ಸ್ವಾದುಗಂಧ ಮತ್ತಿತರ ಹೆಸರುಗಳು ಆಯುರ್ವೇದದಲ್ಲಿ ಈ ಸಸ್ಯಕ್ಕಿದೆ. ಕರಿತುಳಸಿ, ಬಿಳಿತುಳಸಿ, ಕರ್ಪೂರ ತುಳಸಿ, ರಾಮತುಳಸಿ ಹೀಗೆ ಬೇರೆ ಬೇರೆ ಆರೇಳುಬಗೆಯ ತುಳಸಿ ಕಾಣಸಿಗುತ್ತವೆಯಾದರೂ ಕೃಷ್ಣತುಳಸಿ ಮತ್ತು ಬಿಳಿ ತುಳಸಿ ಸಾಮಾನ್ಯರಿಗೆ ಪರಿಚಿತ. ಬೀಜಬಿತ್ತಿ ಸಸಿಯನ್ನು ಪಡೆಯಬಹುದು. ಸಾಧಾರಣ ತೇವಾಂಶವಿರುವ ಪ್ರದೇಶಗಳಲ್ಲಿ ಬೀಜಬಿತ್ತಿ ಒಂದೆರಡು ತಿಂಗಳುಗಳಲ್ಲಿ ಸಸಿಯು ಮೊಳಕೆಯೊಡೆದು ಬೆಳೆಯುತ್ತದೆ. ತುಳಸಿಯ ಔಷಧೀಯ ಉಪಯೋಗಗಳೂ ಬಹಳಷ್ಟಿವೆ.

* ತುಳಸಿ ಎಲೆಗಳ ಸೇವನೆಯು ಶರೀರದ ಉಷ್ಣತೆಯನ್ನು ಹೆಚ್ಚಿಸುತ್ತದೆ.
* ಜೀರ್ಣಶಕ್ತಿಯನ್ನು ವೃದ್ಧಿಸುತ್ತದೆ.
* ಎಲೆ ಮತ್ತು ಬೀಜಗಳಿಗೆ ಕೀಟನಾಶಕ ಗುಣವಿದೆ.
* ಜ್ವರ, ಕೆಮ್ಮು ನೆಗಡಿ, ಗಂಟಲು, ಕಿವಿನೋವು, ಹಲ್ಲುನೋವು ನಿವಾರಣೆಯಲ್ಲಿ ತುಲಸಿ ಬಹಳ ಉಪಯುಕ್ತವಾಗಿದೆ.
* ಬಟ್ಟೆಯಲ್ಲಿ ಶೋಧಿಸಿದ ಒಂದು ಬಿಂದಿಗೆ ಶುದ್ಧ ನೀರಿಗೆ ಐದಾರು ತುಳಸೀದಳಗಳನ್ನು ಹಾಕಿ ಮೂರು–ನಾಲ್ಕು ಗಂಟೆಗಳ ಕಾಲ ಮುಚ್ಚಿಟ್ಟರೆ ನೀರು ಬಹುತೇಕ ರೋಗಾಣುಗಳಿಂದ ಮುಕ್ತವಾಗಿರುತ್ತದೆ.
* ಮನೆಯ ಸುತ್ತ ತುಳಸಿಗಿಡಗಳನ್ನು ಬೆಳೆಸಿದರೆ ಸೊಳ್ಳೆ ಕಾಟ ಕಡಿಮೆಯಾಗುತ್ತದೆ.
* ತುಳಸಿ ಎಲೆಗಳನ್ನು ಚೆನ್ನಾಗಿ ಜಜ್ಜಿ ಶುದ್ಧವಾದ ತೆಳುಬಟ್ಟೆಯಲ್ಲಿ ಕಟ್ಟಿಹಿಂಡಿ ಬರುವ ರಸಕ್ಕೆ, ಕರಿಮೆಣಸಿನ ಪುಡಿ ಮತ್ತು ಜೇನುತುಪ್ಪ ಸೇರಿಸಿ ದಿನಕ್ಕೆ ಎರಡುಮೂರು ಬಾರಿ ಸೇವಿಸಿದರೆ ಜ್ವರ, ಶೀತ, ಕೆಮ್ಮು ನಿಯಂತ್ರಣಕ್ಕೆ ಬರುತ್ತದೆ.
* ಹಸಿವಿಲ್ಲದಾಗ ಅಥವಾ ಅಜೀರ್ಣದ ಸಂದರ್ಭದಲ್ಲಿ ಎರಡು ಚಮಚ ತುಳಸಿ ರಸ, ಅರ್ಧ ಚಮಚ ಶುಂಠಿ ರಸ, ಅರ್ಧ ಚಮಚ ಜೇನುತುಪ್ಪ ಸೇರಿಸಿ ದಿನಕ್ಕೆ ಎರಡು–ಮೂರು ಬಾರಿ ಆಹಾರಕ್ಕೆ ಮುಂಚೆ ಸೇವಿಸಿದರೆ ಸಮಸ್ಯೆ ನಿವಾರಣೆಯಾಗುತ್ತದೆ.
* ಶೀತದಿಂದ ಬರುವ ಕಿವಿ ನೋವಿಗೆ ತುಳಸಿ ಎಲೆಯ ರಸವನ್ನು ಸ್ವಲ್ಪ ಬೆಚ್ಚಗೆ ಮಾಡಿ ಮೂರು–ನಾಲ್ಕು ಹನಿ ಕಿವಿಗೆ ಹಾಕಿದರೆ ನೋವು ಶಮನವಾಗುತ್ತದೆ.
* ಹಲ್ಲ ನೋವಿರುವಾಗ ನಾಲ್ಕಾರು ತುಳಸಿ ಎಲೆಗಳನ್ನು ಒಂದೆರಡು ಮೆಣಸಿನ ಕಾಳಿನ ಜತೆಗೆ ಜಜ್ಜಿ ನೋವಿರುವ ಭಾಗದಲ್ಲಿ ಇಟ್ಟುಕೊಳ್ಳುವುದರಿಂದ ನೋವು ಕಡಿಮೆಯಾಗುತ್ತದೆ.
* ಹುಳುಕಡ್ಡಿ, ಕಜ್ಜಿ, ನವೆ ಮುಂತಾದ ಚರ್ಮದ ತೊಂದರೆಗಳಲ್ಲಿ ತುಳಸಿರಸವನ್ನು ಆಭಾಗಕ್ಕೆ ಹಚ್ಚಿ ಒಂದೆರಡು ಗಂಟೆಗಳ ನಂತರ ನೀರಿನಿಂದ ತೊಳೆಯಬೇಕು.

– ಸಂಗ್ರಹ

**ಪೂರ್ಣಿಮಾ ರೀಜೆನ್ಸಿ,**
**ಸಂಕರ್ಷಣ ಸಭಾಂಗಣ ಶುಭಾರಂಭ**



ಬಳಗದ ಅಧ್ಯಕ್ಷರಾದ
**ಶ್ರೀ ಬಾ.ರಾಮಚಂದ್ರ ಉಪಾಧ್ಯರು**
ಬೆಂಗಳೂರಿನ ಹೊಂಬೇಗೌಡನಗರದ ಹೆಚ್.ಸಿದ್ಧಯ್ಯ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ **ಪೂರ್ಣಿಮಾ ರೀಜೆನ್ಸಿ ಮತ್ತು ಸಂಕರ್ಷಣ ಸಭಾಂಗಣದ ಶುಭಾರಂಭ** ಸಮಾರಂಭವು ಇತ್ತೀಚೆಗೆ ನಡೆಯಿತು.

# ಕಾರ್ಯ ಸಚೇತಕ ಗಣಪತಿ

ಗಣಪತಿ ಪ್ರಥಮ ವಂದಿತನೆಂದೇ ಪ್ರಸಿದ್ಧ. ಯಾವುದೇ ಐಹಿಕ ಕಾಮ್ಯ ಕಾರ್ಯಗಳಾದ ವ್ರತ, ಯಾಗ ಯಜ್ಞ, ಅರಾಧನೆ, ಹಾಗೂ ಧಾರ್ಮಿಕ ಸಂಸ್ಕಾರಗಳ ಪ್ರಾರಂಭದಲ್ಲಿ ಗುರುಗಣಪತಿ ಪೂಜೆ ಮಾಡಲೇಬೇಕೆಂಬ ವಿಧಿಯಿದೆ. ಇಷ್ಟಾರ್ಥಸಿದ್ಧಿಯ ಸನ್ಮಾರ್ಗವನ್ನು ತೋರಿಸುವವನು ಸದ್ಗುರುವಾದರೆ, ಸರ್ವ ವಿಘ್ನಗಳ ಪರಿಹಾರಕ ಗಣಪತಿ ಎಂಬುದು ಶಾಸ್ತ್ರೋಕ್ತ ವಿಚಾರ. ಗಣಪತಿಯು ವಿಘ್ನವನ್ನು ನಿವಾರಿಸಬೇಕಾದರೆ ಪೂಜಕನು ಗಣಪತಿಯ ಸ್ವರೂಪವನ್ನು ಧ್ಯಾನಿಸಿ ಧ್ಯಾನಸ್ವರೂಪಿಯಾದ ಗಣಪತಿಯ ವರ್ಣ, ಆಕಾರ, ವಾಹನ, ಆಯುಧ ಮೊದಲಾದುವುಗಳ ಮಹತ್ವವನ್ನು ಅರಿಯುವುದು ಅತಿ ಅಗತ್ಯ.

**ಗಣಪತಿಯ ಒಂದು ಧ್ಯಾನ ಹೀಗಿದೆ:**

**ರಕ್ತೋರಕ್ತಾಂಗ ರಾಗಾಂಶುಕ ಕುಸುಮಯುತಃ ತುಂದಿಲಃ ಚಂದ್ರಮೌಳಿ:**
**ನೇತ್ರೈಯುಕ್ತೈಸ್ತ್ರಿಭಿಃ ವಾಮನ ಕರಚರಣೋ ಬೀಜಪೂರಾತ್ತನಾಸಃ**
**ಹಸ್ತಾಗ್ರೇ ಕ್ಲೃಪ್ತ ಪಾಶಾಂಕುಶ ರದ ವರದೋ ನಾಗವಕ್ತ್ರೋಹಿಭೂಷೋ:**
**ದೇವಪದ್ಮಾಸನೋ ನೋ ಭವತು ನತಸುರೋ ಭೂತಯೇ ವಿಘ್ನರಾಜಃ॥**

**ರಕ್ತೋರಕ್ತಾಂಗರಾಗ :**

ಕೆಂಪುಬಣ್ಣ ತಡೆಯ ಸೂಚನೆ – ಮುಂಬರುವ ಅಪಾಯವನ್ನು ಮನಗಾಣಲು ಮತ್ತು ಪ್ರಚಲಿತ ವಿದ್ಯಮಾನವನ್ನು ವೀಕ್ಷಿಸುವುದಕ್ಕಾಗಿ

**ತುಂದಿಲಃ :**

ಸ್ವತಃ ಭಾಗಿಯಾಗದೆ ಸೊಂಡಿಲ ಮೂಲಕ ವಾಸ್ತವಿಕತೆಯನ್ನು ಅರಿಯುವ ವಿಚಕ್ಷಣತೆ

**ಚಂದ್ರಮೌಳಿಃ :**

ತಲೆಬಿಸಿ ಮಾಡಿಕೊಳ್ಳದೆ ಸದಾ ತಲೆಯನ್ನು ತಂಪಾಗಿ ಇಟ್ಟುಕೊಳ್ಳುವ ಶೀತಲ ಮನೋಭಾವ, ತಂಪು ಸಹನೆ, ಸ್ಥೈರ್ಯಗಳಿಗೆ ಮೂಲ.

**ತ್ರಿಭಿರ್ನೇತ್ರೈರ್ಯುಕಃ :**

ಬಾಹ್ಯದೃಶ್ಯಕ್ಕಾಗಿ ಎರಡು ಕಣ್ಣುಗಳು, ಅಂತರ್ವೀಕ್ಷಣೆ ಮತ್ತು ಅಂತರಂಗದ ಅರಿವಿಗಾಗಿ ಪ್ರಜ್ಞೆಯೆಂಬ ಮೂರನೇ ಕಣ್ಣು

**ವಾಮನ ಕರಚರಣ :**

ನಮ್ಮ ಕೆಲಸ ಸಾಧಿಸಬೇಕಾದರೆ ತಗ್ಗಿಬಗ್ಗಿ ವಿನಯದಿಂದ ವಾಮನನಾಗಬೇಕು. ಏರಿದವನು ಬಲು ಚಿಕ್ಕವನಿರಬೇಕು ಎನ್ನುವ ಸಂದೇಶವನ್ನು ಸಾರುವುದಕ್ಕಾಗಿ.



**ಬೀಜಪೂರಾತ್ತನಾಸಃ :**

ಜಗತ್ತೆಂಬುದು ಫಲಭರಿತ ಕ್ಷೇತ್ರ. ಬೀಜದಿಂದ ತುಂಬಿರುವ ಫಲವು ನಾಸಾಗ್ರದಲ್ಲಿದ್ದು ಫಲದ ಆಸ್ವಾದನೆಗೆ ಮಾತ್ರ ಗಮನವನ್ನುಸೀಮಿತಗೊಳಿಸದೆ, ಅ ಸಫಲತೆಯ ಹಿಂದಿರುವ ಪ್ರಕೃತಿ, ಪ್ರಯತ್ನ, ಕಾಲನ ಕೈವಾಡ, ಪರಿಪಕ್ವತೆಗಳ ಬಗ್ಗೆ ಯೋಚಿಸುವುದೇ ಇದರ ಅಂತರ್ಗತ ಸಾಂಕೇತಿಕ ವಿಚಾರ.

ಹಸ್ತಾಗ್ರೇ ಕ್ಲೃಪ್ತ ಪಾಶ, ಅಂಕುಶ, ರದ, ವರದ – ಪಾಶವು ಹಲವು ದಿಕ್ಕುಗಳಲ್ಲಿ ಮತ್ತು ವಿಚಾರಗಳಲ್ಲಿ ಹರಿದಾಡಿ ಏಕಾಗ್ರತೆಯನ್ನು ಭಂಗ ಪಡಿಸುವ ಮನವನ್ನು ಹಾಗೂ ಇಂದ್ರಿಯಗಳನ್ನು ಬಂಧಿಸಿ ನಿರ್ದಿಷ್ಟ ಗುರಿಯತ್ತ ಹರಿಸುವ ಅಗತ್ಯದ ಸಂದೇಶ.

**ಅಂಕುಶ:**

ಮನುಷ್ಯನಿಗೆ ದೈವದತ್ತವಾದ ವಿಶಿಷ್ಟ ಕೊಡುಗೆಯಾದ ಬುದ್ಧಿ, ವಿವೇಕಗಳನ್ನು ವಶವರ್ತಿ ಮಾಡಬೇಕಾದರೆ ಆನೆಗೆ ಅಂಕುಶವಿಟ್ಟಂತೆ ಪ್ರಬಲ ಬುದ್ಧಿಗೆ ಹಿಡಿತ ಬೇಕು. ನಿರ್ದಿಷ್ಟ ಗುರಿಸಾಧನೆಗಾಗಿ ಬುದ್ಧಿ ಮತ್ತು ಬಲವನ್ನು ಉಪಯೋಗಿಸಬೇಕಾದ ಅವಶ್ಯಕತೆಯ ಸಂದೇಶ.

**ರದ :**

ಕಾರ್ಯವನ್ನು ಸಾಧಿಸಬೇಕಾದರೆ ನಮ್ಮ ಸೊಕ್ಕಿನ ಸಂಕೇತವಾದ ಹಲ್ಲನ್ನು ಮುರಿದು ತನ್ನ ಕೈಯಲ್ಲಿ ಹಿಡಿದುಕೊಂಡಿರಬೇಕಾದ ಅಗತ್ಯವನ್ನು ಸಾರುವ ಸಂಕೇತ.

**ವರದ :**

ಗಣಪತಿಯು ನೀಡುವ ಸಂಕೇತಗಳನ್ನು ಗ್ರಹಿಸಿ ಪಾಲಿಸಿದ್ದೇ ಆದಲ್ಲಿ ಯಶಸ್ಸನ್ನು ಪಡೆಯುವ ಸಂಕೇತ ವರದಾಯಕ ಮುದ್ರೆ.

**ನಾಗವಕ್ತ್ರ :**

ಆನೆಯತಲೆ–ವಿಶಾಲವಾದ ಕಿವಿಯಿಂದ ನಾನ ಕಡೆಗಳಿಂದ ಬರುವ ಗೂಢ ಸಮಾಚಾರ ಮತ್ತು ಸಂದೇಶಗಳನ್ನು ಆಲಿಸುವುದು. ಸೂಕ್ಷ್ಮವಾದ ಕಣ್ಣುಗಳಿಂದ ವಸ್ತುವಿನ ನಿಗೂಢತೆಯನ್ನರಿಯುವುದು. ವಿಷಯದ ವಾಸನೆಯನ್ನರಿಯಲು ನೀಳನಾಸಿಕ.

**ಅಹಿಭೂಷ :**

ಜಗತ್ತು ಹಾನಿಕಾರಕ ಮತ್ತು ಹಾನಿರಹಿತ ಜಂತುಗಳಿಂದ ತುಂಬಿದ್ದು ಅವುಗಳಿಂದ ಉಪದ್ರ ಮತ್ತು ಉಪಯೋಗಗಳು ಬಹಳಷ್ಟಿವೆ. ಭೂಷಣವಾದ ಹಾವು ವಾಹನವಾದ ಇಲಿಗೆ ವೈರಿಯಾದರೂ ಇವೆರಡನ್ನೂ ಉಪಾಯವಾಗಿ ಅಳವಡಿಸಿಕೊಂಡು ಕಾರ್ಯಸಾಧಿಸುವ ಜಾಣ್ಮೆ.

**ಮೂಷಿಕ ವಾಹನ :**

ದೊಡ್ಡ ಶರೀರಕ್ಕೆ ಚಿಕ್ಕ ಇಲಿ ವಾಹನ. ವಿಚಿತ್ರ ಆದರೂ ಅರ್ಥಪೂರ್ಣ. ಬಿಲದಲ್ಲಿ ಅರಿತಿರುವ ರಹಸ್ಯಗಳ ಅರಿವಿಗಾಗಿ ಈ ಚುರುಕು ಬುದ್ಧಿಯ ತೀವ್ರ ಚಲನೆಯ ಇಲಿಯ ಮಹತ್ವವನ್ನು ಮನಗಾಣಬೇಕು.

**ಲಂಬೋದರ:**

ಉದಾರತೆಯ ಪ್ರತೀಕ ದೊಡ್ಡ ಹೊಟ್ಟೆ. ಹೊಟ್ಟೆಯೊಳಗೆ ಹಾಕಿಕೊಂಡು ಕ್ಷಮಿಸುವಂತೆ ದುರ್ಬಲರ ಪ್ರಾರ್ಥನೆ. ಎಲ್ಲವನ್ನೂ ನುಂಗಿ (ಸಹಿಸಿಕೊಂಡು) ದೊಡ್ಡದಾದ ಹೊಟ್ಟೆಯುಳ್ಳ ಗಣಪತಿಯು ಕ್ಷಮಾಮೂರ್ತಿ. ವಿನೋದಪ್ರಿಯ.

ಈ ರೀತಿಯಾಗಿ ಗಣಪತಿಯ ಮೈಬಣ್ಣ, ಆಕಾರ, ಅಂಗಾಂಗಗಳು, ಅಯುಧ, ವಾಹನ, ಭೂಷಣವೆಲ್ಲವೂ ಸಾಧಕನ ಯಶಸ್ಸಿಗೆ ನೀಡುವ ಅರ್ಥಪೂರ್ಣ ಸಂಕೇತಗಳು.

ಎಷ್ಟೋ ಸುಂದರ ಸ್ವರೂಪದ ದೇವತಾ ಮೂರ್ತಿಗಳನ್ನು ಕಲ್ಪಿಸಿರುವ ದಿವ್ಯದ್ರಷ್ಟಾರರಿಗೆ ಈ ವಿಚಿತ್ರ ರೂಪದ ಗಣಪತಿಯ ಕಲ್ಪನೆಯೂ ಅಷ್ಟೆ ಅರ್ಥಪೂರ್ಣ. ಸಾಧಕನ ಸಫಲತೆಗೆ ಮಹತ್ವಪೂರ್ಣ ಮಾರ್ಗದರ್ಶಿ.

– **ಹರಿದಾಸ ಮುನ್ನೂರು**

ತುಳು ಕೀರ್ತನೆ

## ಗಣೇಶ ವಂದನೆ



**ಆನೆ ಮೋರೆದೊ ಮಲ್ಲೊ ಬಂಜಿದೊ ಮಹಾಗಣಪತಿ ದೇವೆರೆ**
**ನಟ್ಟೊಂದುಳ್ಳೊ ನಮ ಎರಡ್ ಕೈ ಮುಗಿತ್ ಏಪಲ ಎಂಕ್ಲೆನ್ ಕಾಪೆರೆ ॥ 1 ॥**


**ಅಮ್ಮ ಪಾರ್ವತಿ ಬೆಗರ್ ಮಣ್ಣ್‌ಡ್ ರೂಪೊ ಕೊಳಿಂಚಿ ಬಾಲೆನೆ**
**ಜೀವ ಕೊಳಿಯೆರೆ ಈಶ್ವರ ದೇವೆರ್ ಇಜಿಯೆರ್ ಆನೆದೊ ಮೋರೆನೆ ॥ 2 ॥**

**ಚೌತಿಗೆಂಕುಳು ಮಣ್ಣ ಮೂರ್ತಿನ್ ಇಜಿತ್ ನಟ್ಟುವೊ ಕಾಪೆರೆ**
**ಕಳೆಲೆ ಕಷ್ಟನ್ ಎಡ್ಡೆ ಬದ್ಕ್‌ನ್ ಕೊಳ್ಳೆ ಗಣಪತಿ ದೇವೆರೆ ॥ 3 ॥**

**–ದಶರಥ**

## ವ್ಯಾಸಂಗ ಸಹಾಯ ಯೋಜನೆ

ಆನಂದ ಬಳಗವು ಕೆಲವು ವರ್ಷಗಳ ಹಿಂದೆ ಕೆಲವು ಉದಾರ ಮನಸ್ಸಿನ ದಾನಿಗಳ ಸಹಾಯದಿಂದ ಆರಂಭಿಸಿರುವ ವ್ಯಾಸಂಗ ಸಹಾಯ ಯೋಜನೆಯ ಪ್ರಯೋಜನವನ್ನು ಬಳಗದ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ಪಡೆದಿರುತ್ತಾರೆ. 2022–23ನೇ ಸಾಲಿನಲ್ಲಿ ವೃತ್ತಿಪರ ಶಿಕ್ಷಣಕ್ಕೆ ಸೇರಬಯಸುವ ಬಳಗದ ಆರ್ಥಿಕವಾಗಿ ದುರ್ಬಲರಾದ ಸದಸ್ಯರ ಪ್ರತಿಭಾವಂತ ಮಕ್ಕಳು ಈ ಯೋಜನೆಯ ಸಹಾಯವನ್ನು ಪಡೆಯಬಹುದಾಗಿದೆ.



ಅಗತ್ಯವುಳ್ಳ ಅರ್ಹ ಸದಸ್ಯರುಗಳು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ.

ಆಸಕ್ತರು ದಿನಾಂಕ 15–8–2022 ರೊಳಗಾಗಿ ನೋಂದಾಯಿಸಬೇಕಾಗಿ ವಿನಂತಿ.

**ಬಿ.ಎಸ್.ಬಾಲಚಂದ್ರ ತೋಳ್ಪಾಡಿ**
ಸಂಚಾಲಕರು, ವ್ಯಾಸಂಗ ಸಹಾಯ ಯೋಜನೆ, ಆನಂದ ಬಳಗ
ದೂರವಾಣಿ: 9448134268

ಮುದ್ರೆಗಳು

## ಆತ್ಮಾಂಜಲಿ ಮುದ್ರೆ



ನಾವು ಪ್ರತಿದಿನವೂ ದೇವರ ಪ್ರಾರ್ಥನೆ ಮಾಡುವ ವೇಳೆ ಕೈಗಳನ್ನು ಜೋಡಿಸುವ ಕ್ರಮವೇ ಆತ್ಮಾಂಜಲಿ ಮುದ್ರೆ. ಎರಡೂ ಹಸ್ತಗಳನ್ನು ಅನಾಹತ (ಹೃದಯ) ಚಕ್ರದ ಎದುರಲ್ಲಿ ಆಕಾಶಾಭಿಮುಖವಾಗಿ ಜೋಡಿಸಬೇಕು. ಎರಡೂ ಅಂಗೈಗಳ ಮಧ್ಯೆ ಗಾಳಿಯಾಡುವಂತೆ ಅವಕಾಶವಿರಬೇಕು. ಧ್ಯಾನದ ಪ್ರಾರಂಭದಲ್ಲಿಯಾಗಲೀ ಅಂತ್ಯದಲ್ಲಿಯಾಗಲೀ ಕುಳಿತಂತೆಯೇ ಅಥವಾ ನಿಂತಿರುವಂತೆಯೇ ಕೈಗಳನ್ನು ಜೋಡಿಸಿಕೊಂಡೇ ತೋಳುಗಳನ್ನು ಮೇಲಕ್ಕೆತ್ತಿ ಆಕಾಶದತ್ತ ಚಾಚಬೇಕು. ಎದೆಯ ಮುಂದೆ ಕೈಗಳನ್ನು ಜೋಡಿಸಿಕೊಂಡಾಗ ಮೌನ, ಪ್ರಶಾಂತತೆ, ನಿರಾತಂಕ ಭಾವ, ಸಮಸ್ಥಿತಿ, ಮನೋಸ್ಥಿಮಿತವನ್ನು ಈ ಮುದ್ರೆಯಿಂದ ಪಡೆಯಬಹುದು. ಈ ಮುದ್ರೆಯೊಂದಿಗೆ ಧ್ಯಾನನಿರತರಾಗುವುದರಿಂದ ಮೆದುಳಿನ ಎರಡೂ ಪಾರ್ಶ್ವಗಳು ಕ್ರಿಯಾಶೀಲಗೊಳ್ಳುತ್ತವೆ. ನಮ್ಮ ಅಭೀಷ್ಟಗಳ ಸಿದ್ಧಿಗೆ ದೈವದೇವರುಗಳಲ್ಲಿ ಮಾಡುವ ಪ್ರಾರ್ಥನೆಗೆ ಈ ಮುದ್ರೆಯು ಪೂರಕವಾಗಿ ಸ್ಪಂದಿಸುತ್ತದೆ. ಈ ಮುದ್ರೆಯನ್ನು ಇತರರಿಗೆ ಗೌರವ ನೀಡಲು ವಂದಿಸುವಾಗ ಬಳಸುತ್ತೇವೆ.

## ಜುಲೈ 20ರಿಂದ ಅಕ್ಟೋಬರ್ ತಿಂಗಳ ವರೆಗೆ ವಿಶೇಷ ದಿನಗಳು

| | | |
|---|---|---|
| ಜುಲೈ | 28 ಗುರುವಾರ | ಆಟಿ ಅಮಾವಾಸ್ಯೆ |
| ಜುಲೈ | 31 ಭಾನುವಾರ | ಆನಂದ ಬಳಗದ ವತಿಯಿಂದ ಸಾಮೂಹಿಕ ದೀಪ ದುರ್ಗಾ ನಮಸ್ಕಾರ ಪೂಜೆ |
| ಆಗಸ್ಟ್ | 2 ಮಂಗಳವಾರ | ನಾಗರಪಂಚಮಿ |
| ಆಗಸ್ಟ್ | 3 ಬುಧವಾರ | ಕಲ್ಕಿ ಜಯಂತಿ |
| ಆಗಸ್ಟ್ | 5 ಶುಕ್ರವಾರ | ವರಮಹಾಲಕ್ಷ್ಮೀ ವ್ರತ |
| ಆಗಸ್ಟ್ | 7 ಭಾನುವಾರ | ಆನಂದ ಬಳಗದ ಮಕ್ಕಳಿಗಾಗಿ ಪ್ರತಿಭಾ ಸ್ಪರ್ಧೆ |
| ಆಗಸ್ಟ್ | 11 ಗುರುವಾರ | ಯಜುರುಪಾಕರ್ಮ–ರಕ್ಷಾಬಂಧನ |
| ಆಗಸ್ಟ್ | 12 ಶುಕ್ರವಾರ | ಆಟಿಹುಣ್ಣಿಮೆ |
| ಆಗಸ್ಟ್ | 13 ಶನಿವಾರ | ಶ್ರೀರಾಘವೇಂದ್ರ ಸ್ವಾಮಿಗಳ ಪುಣ್ಯತಿಥಿ |
| ಆಗಸ್ಟ್ | 18 ಗುರುವಾರ | ಶ್ರೀಕೃಷ್ಣ ಜನ್ಮಾಷ್ಟಮೀ |
| ಆಗಸ್ಟ್ | 19 ಶುಕ್ರವಾರ | ವಿಟ್ಲಪಿಂಡಿ ಉತ್ಸವ |
| ಆಗಸ್ಟ್ | 30 ಮಂಗಳವಾರ | ಗೌರೀತೃತೀಯ |
| ಆಗಸ್ಟ್ | 31 ಬುಧವಾರ | ಗಣೇಶ ಚತುರ್ಥಿ |
| ಸೆಪ್ಟೆಂಬರ್ | 4 ಭಾನುವಾರ | ಆನಂದ ಬಳಗದ ಗಣೇಶೋತ್ಸವ |
| ಸೆಪ್ಟೆಂಬರ್ | 8 ಗುರುವಾರ | ಋಗುಪಾಕರ್ಮ |
| ಸೆಪ್ಟೆಂಬರ್ | 9 ಶುಕ್ರವಾರ | ಅನಂತಚತುರ್ದಶಿ |
| ಸೆಪ್ಟೆಂಬರ್ | 10 ಶನಿವಾರ | ಮಹಾಲಯಾರಂಭ |
| ಸೆಪ್ಟೆಂಬರ್ | 24 ಶನಿವಾರ | ಮಕ್ಕಳ ಪ್ರತಿಭಾ ಮೇಳ ಮತ್ತು ಪ್ರತಿಭಾ ಪುರಸ್ಕಾರ |
| ಸೆಪ್ಟೆಂಬರ್ | 25 ಭಾನುವಾರ | ಮಹಾಲಯ ಅಮಾವಾಸ್ಯೆ |
| ಸೆಪ್ಟೆಂಬರ್ | 26 ಸೋಮವಾರ | ನವರಾತ್ರಿ ಆರಂಭ |
| ಸೆಪ್ಟೆಂಬರ್ | 30 ಶುಕ್ರವಾರ | ಲಲಿತಾ ಪಂಚಮಿ |
| ಅಕ್ಟೋಬರ್ | 4 ಮಂಗಳವಾರ | ಅಯುಧಪೂಜೆ |
| ಅಕ್ಟೋಬರ್ | 5 ಬುಧವಾರ | ವಿಜಯದಶಮೀ |
| ಅಕ್ಟೋಬರ್ | 24 ಸೋಮವಾರ | ನರಕಚತುರ್ದಶಿ |
| ಅಕ್ಟೋಬರ್ | 25 ಮಂಗಳವಾರ | ದೀಪಾವಳಿ ಅಮಾವಾಸ್ಯೆ–ಲಕ್ಷ್ಮೀಪೂಜೆ |
| ಅಕ್ಟೋಬರ್ | 26 ಬುಧವಾರ | ಗೋಪೂಜೆ–ತುಳಸಿಪೂಜಾರಂಭ |

# ಶುಭ - ವಿವಾಹ



ಬಳಗದ ಸಕ್ರಿಯ ಸದಸ್ಯರಾದ ಪೂರ್ಣಪ್ರಜ್ಞ ವಿದ್ಯಾಪೀಠದ ಮಾಜಿ ಕಾರ್ಯದರ್ಶಿಗಳಾದ ವಿದ್ವಾನ್ ಶ್ರೀ ಯು.ಕೇಶವಾಚಾರ್ಯ ಮತ್ತು ಶ್ರೀಮತಿ ಲತಾ ದಂಪತಿಗಳ ಸುಪುತ್ರಿ ಸೌ.ಅಮೇಯವರ ವಿವಾಹವು ಆರಿಕ್ಕಾಡಿ ಶ್ರೀ ಶ್ರೀಕರ ದೇವಪೂಜಿತ್ತಾಯ ಮತ್ತು ಶ್ರೀಮತಿ ಚಂದ್ರಿಕಾ ದಂಪತಿಗಳ ಸುಪುತ್ರ ಚಿ. ಸಚಿನ್ ಎಂಬ ವರನೊಡನೆ 13.6.2022ರಂದು ಪಾಜಕ ಕ್ಷೇತ್ರದ ವ್ಯಾಸಮಾಧ್ವ ಸಭಾಗೃಹದಲ್ಲಿ ನರವೇರಿತು.



ಬಳಗದ ಕೋಶಾಧಿಕಾರಿ ಶ್ರೀ ಗುರುಮೂರ್ತಿ ಮತ್ತು ಶ್ರೀಮತಿ ಸಂಧ್ಯಾ ದಂಪತಿಗಳ ಸುಪುತ್ರ ಚಿ.ರಾ. ರಾಜೇಶಕೃಷ್ಣ ಅವರ ವಿವಾಹವು ಶ್ರೀಮತಿ ಪಾರ್ವತಿ ಮತ್ತು ಶ್ರೀ ಶಂಕರನಾರಾಯಣ ಶ್ಯಾನುಭೋಗ ದಂಪತಿಗಳ ಸುಪುತ್ರಿ ಚಿ.ಸೌ.ಪೂರ್ಣಿಮಾ ಅವರೊಂದಿಗೆ 17.4.2022 ಭಾನುವಾರದಂದು ಪುತ್ತೂರಿನ ಸ್ವಾಮಿ ಕಲಾಮಂದಿರದಲ್ಲಿ ನಡೆಯಿತು. ಆರತಕ್ಷತೆ ಕಾರ್ಯಕ್ರಮವು ಬೆಂಗಳೂರಿನ ಕೊತ್ತನೂರು ಮುಖ್ಯರಸ್ತೆಯಲ್ಲಿರುವ ಶುಭ್ ಕನ್ವೆನ್ಷನ್ ಸಭಾಂಗಣದಲ್ಲಿ 22.4.2022ರಂದು ನಡೆಯಿತು.



ಬಳಗದ ಸದಸ್ಯರಾದ ಶ್ರೀ ಮುರಳೀಧರ ರಾವ್ ಮತ್ತು ಶ್ರೀಮತಿ ಜ್ಯೋತಿ ದಂಪತಿಗಳ ಸುಪುತ್ರಿ ಚಿ.ಸೌ.ಅಖಿಲಾ ರಾವ್ ಅವರ ವಿವಾಹವು ಶ್ರೀ ಸರ್ವೋತ್ತಮ ರಾವ್ ಮತ್ತು ಶ್ರೀಮತಿ ವಿಮಲಾ ದಂಪತಿಗಳ ಸುಪುತ್ರ ಚಿ.ಹರಿಕೀರ್ತನ ರಾವ್ ಅವರೊಂದಿಗೆ 25.6.22ರಂದು ಎರ್ಮಾಳಿನ ಶ್ರೀ ಜನಾರ್ದನ ದೇವಸ್ಥಾನದ ಶ್ರೀ ಜನಾರ್ದನ ಜನಕಲ್ಯಾಣ ಸಭಾಂಗಣದಲ್ಲಿ ನರವೇರಿತು. ಆರತಕ್ಷತೆಯು ತಮಿಳ್ನಾಡಿನ ತಿರುನಲ್ವೇಲಿಯ ಚರಣಮಹಾದೇವಿ ಶ್ರೀ ರಾಜರಾಜೇಶ್ವರೀ ಕಲ್ಯಾಣ ಮಂಡಪಂನಲ್ಲಿ ನಡೆಯಿತು.



ಆನಂದ ಬಳಗದ ಸದಸ್ಯರಾದ ಡಾ. ಹೆಚ್.ಎಲ್.ರಮೇಶ್ ಮತ್ತು ಶ್ರೀಮತಿ ಸುಜಾತಾ ರಮೇಶ್ ದಂಪತಿಗಳ ಸುಪುತ್ರ ಚಿ.ರಾ. ಅಶ್ವಿನ್ ಅವರ ವಿವಾಹವು ವಿರಾಜಪೇಟೆಯ ಶ್ರೀ ಚಂದ್ರಮೋಹನ ಕುದ್ರೆತ್ತಾಯ ಮತ್ತು ಶ್ರೀಮತಿ ಸೀತಾಲಕ್ಷ್ಮೀ ದಂಪತಿಗಳ ಸುಪುತ್ರಿ ಚಿ. ಸೌ ಪವಿತ್ರ ಭಾರ್ಗವ ಅವರೊಂದಿಗೆ 10-2-2022ರಂದು ಮೈಸೂರಿನ ಎಸ್.ಕೆ.ಕನ್ವೆನ್ಷನ್ ಭವನದಲ್ಲಿ ನರವೇರಿತು. 11.2.2022 ರಂದು ಬೆಂಗಳೂರಿನ ಹೋಟೆಲ್ ಅಜಂತಾದಲ್ಲಿ ಆರತಕ್ಷತೆ ಏರ್ಪಡಿಸಲಾಗಿತ್ತು.

**ನೂತನ ವಧೂವರರಿಗೆ ಭೃಗುವಾಣಿಯ ಶುಭಾಶಯಗಳು.**

# ಮಕ್ಕಳು ಎಂದಿಗೂ ಮಕ್ಕಳೇ

ಮಕ್ಕಳು ಮಕ್ಕಳು ಮಕ್ಕಳು
ಮಕ್ಕಳು ಎಂದಿಗೂ ಮಕ್ಕಳೆ!
ಮಕ್ಕಳೆಂದರೆ ಅದೆಷ್ಟು ಅಕ್ಕರೆ,
ಸಕ್ಕರೆಯ ಸಿಹಿಗಿಂತಲೂ, ಇಲ್ಲಾ

ಇನ್ನು ಯಾವುದೇ ಸಿಹಿಗಿಂತಲೂ ಸವಿ!
ಹೌದು, ಮಕ್ಕಳಿರಲವ್ವಾ ಮನೆ ತುಂಬ ಎನ್ನುವರು,
'ಮಕ್ಕಳೆ ಮನೆಗೆ ಮಾಣಿಕ್ಯ' ಚೆನ್ನು ನಾಣ್ಣುಡಿ,
ಮಕ್ಕಳು ಮುದ್ದು ಮಕ್ಕಳು, ಮುಗ್ಧ ಮಕ್ಕಳು.

ಮಕ್ಕಳ ಯಾವುದೇ ಚೇಷ್ಠೆಗಳಿಗೆ ತಡೆಯಿಲ್ಲ!
ತಡೆಯಿದ್ದರೂ ಮುನಿಸಿಲ್ಲ, ಮುನಿಸಿದ್ದರೂ ಒಂದರೆಕ್ಷಣ
ಮಕ್ಕಳ ಆಟ, ಆಟದೊಳಗೊಂದು ಆಟ, ಪೀಕಲಾಟ
ಬಲ್ಲ ಹಿರಿಯರಿಗೆಲ್ಲ ನೋಡುವಾಟ, ಆನಂದದಾಟ

ಹೌದು! ಸಂಚಿ ಹೊನ್ನಮ್ಮನ ನುಡಿ, ಹೇಳಿದ್ದಳು –
ಬಾಲಕರಿಲ್ಲದ ಬಾಳಿದ್ಯಾತರ ಜನ್ಮ' ಸಾರ್ವಕಾಲಿಕ
ಮಕ್ಕಳು ನಕ್ಕರೆ ಹಾಲ್ಗೊರೆ ಉಕ್ಕಿದಂತೆ, ಮತ್ತೆ
ಮಕ್ಕಳು ಅತ್ತರೆ ಕರುಳು ಕಿತ್ತುಬಂದಂತೆ

ಮಕ್ಕಳು ಮುಗ್ಧರು, ಸತ್ಯವಂತ ದೇವರುಗಳು
ತಿಳಿದವರು ಹೇಳುವರು, ಇಂದಿನ ಮಕ್ಕಳೇ
ಮುಂದಿನ ಪ್ರಜೆಗಳು, ಹೆಸರ ನುಳಿಸುವವರು
ಆದರೆ, ನಾವು ತಿಳಿದ ಹಿರಿಯರು ಮಾಡುವುದೇನು?

ತಿಳಿದೂ ತಿಳಿಯದೆ ಬೆಳೆಸುವೆವು ಸ್ವಾರ್ಥ ಅನ್ನವನಿತ್ತು
ಮತ್ತೆ ತಪ್ಪಿದೂಡುವೆವು ಭ್ರಷ್ಟಸಂಸ್ಕೃತಿಯ ಕೊಚ್ಚೆಗುಂಡಿಗೆ
ಮಕ್ಕಳೇ, ಎಚ್ಚರಿಕೆ, ಬೆಳೆಯಿರಿ, ಬೆಳೆಸಿರಿ
ಜ್ಞಾನ ಸಂಪತ್ತನ್ನು; ತೊಳೆಯಿರಿ, ತೊಳೆಸಿರಿ
ನಮಗೊದಗುವ, ಒದಗಿದ ಭ್ರಷ್ಟಾಚಾರವೆಂಬ ಕೊಳೆಗಳನ್ನು



**– ಟಿ.ಎಸ್. ನಾಗರಾಜ ಉಪಾಧ್ಯಾಯ**
ವಾಮಂಜೂರು



# ಭಾವಪೂರ್ಣ ಶ್ರದ್ಧಾಂಜಲಿ



* ಬಳಗದ ಅಧ್ಯಕ್ಷರಾದ ಶ್ರೀ ಬಾಳೇಕುದ್ರು ರಾಮಚಂದ್ರ ಉಪಾಧ್ಯರ ಮಾತೃಶ್ರೀಯವರಾದ **ಶ್ರೀಮತಿ ಯಶೋದಮ್ಮ ಉಪಾಧ್ಯರು** 3.5.2022ರಂದು ಅಲ್ಪಕಾಲದ ಅನಾರೋಗ್ಯದಿಂದ ನಿಧನಹೊಂದಿದರು. ಅವರಿಗೆ 92 ವರ್ಷ ವಯಸ್ಸಾಗಿತ್ತು.




* ಬಳಗದ ಸದಸ್ಯರಾದ **ಶ್ರೀ ಶ್ರೀನಿವಾಸ ಆಚಾರ್** ಅವರು 2.5.2022 ನಿಧನರಾದರು.



* ಬಳಗದ ಸಕ್ರಿಯ ಸದಸ್ಯರಾದ, ಪಿ.ಜಿ.ಮಾಲೀಕರ ಸಂಘದ ಅಧ್ಯಕ್ಷರಾಗಿದ್ದ **ಅಶೋಕರಾಜ್ ಪಣಂಬೂರು** ಅವರು 25.5.2022 ರಂದು ಅಲ್ಪಕಾಲದ ಅಸ್ವಾಸ್ಥ್ಯದಿಂದ ನಿಧನ ಹೊಂದಿದರು.



* ಬಳಗದ ಸದಸ್ಯರಾದ **ಸುಬ್ರಹ್ಮಣ್ಯ ಕೆ. ಭಟ್** ಅವರು 15.6.2022 ರಂದು ವಿಧಿವಶರಾದರು



* ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಅರ್ಚಕರಾಗಿ ದೀರ್ಘಕಾಲ ಸೇವೆ ಸಲ್ಲಿಸಿ ಜನಾನುರಾಗಿಗಳಾಗಿದ್ದ ವೇದಮೂರ್ತಿ **ಶ್ರೀ ಕೇಶವ ಜೋಗಿತ್ತಾಯರು** 24.5.2022 ರಂದು ನಿಧನ ಹೊಂದಿದರು.

**ದಿವಂಗತರಿಗೆ ಸದ್ಗತಿ ದೊರೆಯಲೆಂದು ಪ್ರಾರ್ಥಿಸಿ ಭೃಗುವಾಣಿ ಶ್ರದ್ಧಾಂಜಲಿ ಸಲ್ಲಿಸುತ್ತದೆ.**







**Available at all Ayurvedic Medical Stores**

BPRL


Manufactured by

**Bangalore Pharmaceutical & Research Laboratory (P) Ltd.**

No.163, Reservoir Street, Basavanagudi, Bengaluru - 560 004. INDIA

Consumer Care No. : 080-41208661 | Website: www.bprl.in

Bhrugu Vani Kannada-Tulu-English Quarterly KARMUL/2021/79912 Bengaluru, April - June 2022 No. of Pages : 32 (28+4)




If undelivered please return to:
Ananda Balaga
Hotel Ajantha Complex, 22A, M.G. Road
Bengaluru - 560 001
Phone : 2559 4457

Bhrugu Vani - Printed & Published by P.S. Bagilthaya, on behalf of Ananda Balaga, Printed at Omkar Offset Printers, 3/3, 1st Main Road, New Tharagupet, Bengaluru - 560 002. Published at Ananda Balaga. Hotel Ajantha Complex, 22A, M.G.Road, Bengaluru - 560001. Editor : D. Sharath Kumar Bhat